ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ | Chilume Circulated in and around 10 countries | ಸಂಚಿಕೆ ೮, ಜನವರಿ 2014

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಿಡ್ನಿ ಕನ್ನಡ ಶಾಲೆ ವಾರ್ಷಿಕೋತ್ಸವ ... ಪು. ೧
ಸಂಪಾದಕೀಯ ... ಪು. ೨
ಆರ್ಯಭಟ-ಆರ್ಯಭಟೀಯ ... ಪು. ೩

ಚಿಲುಮೆಯ ಒಳಗೆ

ರಾಂ ರಾಮ! ಹಾಸ್ಯ ... ಪು. ೫
ಕಥಾ ಚಿಲುಮೆ ... ಪು. ೬
ರೆಸಿಪಿ ಕೊಡ್ತೀರಾ! ... ಪು. ೬

ಚಿಲುಮೆಯ ಒಳಗೆ

ಕಾವ್ಯ ಚಿಲುಮೆ ... ಪು. ೧೦
ಹಾಸ್ಯ ಚಿಲುಮೆ ... ಪು. ೧೦

ಚಿಲುಮೆಯ ಒಳಗೆ

ಸಂಕಲ್ಪಂ ಆವಾಹಯಾಮಿ(ಹಾಸ್ಯ)... ಪು. ೧೧
ಪದ ಪುಂಜ ... ಪು. ೧೨
ರಂಗೋಲಿ ... ಪು. ೧೨

ಚಿಲುಮೆಯ ಒಳಗೆ

ಸೈಕಲ್ ಪಯಣ ... ಪು. ೧೩
ಛಾಯಾ ಚಿಲುಮೆ ... ಪು. ೧೪
ವಿಜ್ಞಾನ, ಅಲ್ಲಲ್ಲಿ ಏನೇನು ... ಪು. ೧೬

ಚಿಲುಮೆಯ ಒಳಗೆ

ಹೊಸ ನಮೂನೆಯ ಪದ ಪುಂಜ ಈ ಸಂಚಿಕೆಯಿಂದ ...

ಸಿಡ್ನಿ ಕನ್ನಡ ಶಾಲೆ – ವಾರ್ಷಿಕ ದಿನಾಚರಣೆ

ಸಿಡ್ನಿಯ ವಾರಾಂತ್ಯದ ಕನ್ನಡ ಶಾಲೆಯ ಮಕ್ಕಳು, ಗುರುಗಳು ಮತ್ತು ಪೋಷಕರು ಸಂಭ್ರಮ ಹಾಗು ನಗುಮುಖದಿಂದ ಶಾಲೆಯ ದಿನಾಚರಣೆಗೆ ಆಸೀನರಾಗಿದ್ದರು. ವೇದಿಕೆಯಲ್ಲಿ ಅತಿಥಿಗಳಾದ ಶ್ರೀಯುತ ಚಂದ್ರಶೇಖರ ದೇವುಡು ಮತ್ತು ಅವರ ಪತ್ನಿ ಡಾ॥ ರೇಖಾ ದೇವುಡು, ರಮ್ಯವರನ್, ವೀಣಾ ಸುದರ್ಶನ್, ರಾಜೇಶ್ ಹೆಗಡೆ ಕುರ್ಚಿಯನ್ನು ಅಲಂಕರಿಸಿದ್ದರು. ದೇವುಡು ಅವರು ಆಸ್ಟ್ರೇಲಿಯಾ SBS ರೇಡಿಯೋನಲ್ಲಿ ಕನ್ನಡ ಕಾರ್ಯಕ್ರಮವನ್ನು ಬಹಳ ವರ್ಷಗಳಿಂದ ನಡೆಸಿಕೊಡುತ್ತಾ ಸಿಡ್ನಿ ಕನ್ನಡಿಗರಿಗೆ ಚಿರಪರಿಚಿತ. ಇನ್ನೊಬ್ಬ ಮುಖ್ಯ ಅತಿಥಿ ರಮ್ಯಾವರನ್ ಅವರು ಹಿಂದೂ ಸೇವಾ ಸಮಾಜದ ಮುಖ್ಯ ಕಾರ್ಯಕರ್ತರು. ಇವರಿಬ್ಬರ ಪರಿಚಯವನ್ನು ಶ್ರೀಯುತ ನಾರಾಯಣ್ ನೆರೆದವರಿಗೆಲ್ಲಾ ಮಾಡಿಕೊಟ್ಟರು. ಪ್ರೇಕ್ಷಕರು ಚಪ್ಪಾಳೆಯ ಮೂಲಕ ಅತಿಥಿಗಳನ್ನು ಬರಮಾಡಿಕೊಂಡರು .

ಮಕ್ಕಳೆಲ್ಲಾ ಮೊದಲಿಗೆ ವೇದಿಕೆಯ ಮೇಲೆ ಬಂದು "ದೇವ ನಿನ್ನ ಬೇಡುವೆ" ಹಾಡನ್ನು ಸುಶ್ರಾವ್ಯವಾಗಿ ಹಾಡಿ , ಎಲ್ಲರನ್ನೂ ಸಂತೋಷಗೊಳಿಸಿದರು . ನಂತರ ಲಿವರ್ಪೂಲ್ ಶಾಲೆಯ ಮುಖ್ಯ ಶಿಕ್ಷಕಿ ವೀಣಾ ಸುದರ್ಶನ್ ಅವರು ಕನ್ನಡ ಕಲಿಕೆಯ ಮತ್ತು ಪ್ರಾಮುಖ್ಯತೆಯ ಬಗ್ಗೆ ಮಾತಾಡಿದರು. ನಂತರ ಚಂದ್ರಶೇಖರ ದೇವುಡು ಅವರು ಮೊದಲು ಪೋಷಕರಿಗೆ ಅಭಿನಂದಿಸುತ್ತಾ , ಮಕ್ಕಳ ಕನ್ನಡದ ಕಲಿಕೆಗೆ ಪ್ರೋತ್ಸಾಹ ಕೊಟ್ಟಿರುವುದು ದೊಡ್ಡ ವಿಷಯವೆಂದು ಪ್ರಸ್ತಾಪಿಸಿದರು. ಭಾಷೆ ಏಕೆ ಮುಖ್ಯ, ಯಾಕೆ ನಾವು ಅದನ್ನು ಕಲಿಯಬೇಕು, ಹೇಗೆ ಅದು ಹುಟ್ಟಿರಬಹುದು ಎಂದು ಸಂಕ್ಷಿಪ್ತವಾಗಿ ಮಕ್ಕಳಿಗೆ ವಿವರಿಸಿದರು. ಶ್ರೀಯುತ ರಮ್ಯವರನ್ ಅವರೂ ಕೂಡ ಕನ್ನಡ ಭಾಷೆಯ ಮಹತ್ವ, ಅದನ್ನು ಎಲ್ಲೆಲ್ಲಿ ಬಳಸಬಹುದು ಎಂದು ಮಕ್ಕಳಿಗೆ ಮತ್ತು ಪೋಷಕರಿಗೆ ಮನದಟ್ಟು ಮಾಡಿ ಕೊಟ್ಟರು.

ಶ್ರೀಯುತ ರಮ್ಯವರನ್ ರವರು, ಪರೀಕ್ಷೆ ಬರೆದು ಉತ್ತಮ ಅಂಕಗಳನ್ನು ತೆಗೆದುಕೊಂಡ ಮಕ್ಕಳಿಗೆಲ್ಲಾ ಸರ್ಟಿಫಿಕೇಟ್ ಮತ್ತು ಚೆಕ್ಕ ಆಟದ ಸಾಮಾನು ಬಹುಮಾನ ರೂಪವಾಗಿ ವಿತರಿಸಿದರು. ಮಕ್ಕಳು ಒಬ್ಬರ ನಂತರ ಒಬ್ಬರು ಹೆಮ್ಮೆಯ ಮುಖಭಾವದಿಂದ ಬಹುಮಾನವನ್ನು ಸ್ವೀಕರಿಸಿದರು . ಶ್ರೀಯುತ ಚಂದ್ರಶೇಖರ ದೇವುಡುರವರು ಲಿವರ್ಪೂಲ್ ಶಾಲೆ, ಪಾರಾಮಟ ಶಾಲೆ, ಎಪ್ಪಿಂಗ್ ಶಾಲೆಯ ಎಲ್ಲ ಶಿಕ್ಷಕರಿಗೂ ಉಡುಗೊರೆಗಳನ್ನು ವಿತರಿಸಿದರು.

(ಮುಂದಿನ ಪುಟ ನೋಡಿ) ...

ಕೇ ಳೋ ಣ

ಬಂಗಾರ ನೀರ ಕಡಲಾಚೆ ಈಚೆ ...
ಭಾವಗೀತೆ ಕೇಳಲು ಚಿತ್ರ ಕ್ಲಿಕ್ ಮಾಡಿ (Click picture to view)

ಹೊಸ ನಮೂನೆಯ
ಪದಪುಂಜ
ಪುಟ ೧೨ ರಲ್ಲಿ

ಶಾನುಭೋಗರ ಮಗಳು ...
ಭಾವಗೀತೆ ಕೇಳಲು ಚಿತ್ರ ಕ್ಲಿಕ್ ಮಾಡಿ (Click picture to view)

ನೋ ಡೋ ಣ

ಸಿಡ್ನಿ ಕನ್ನಡ ಶಾಲೆ – ವಾರ್ಷಿಕ ದಿನಾಚರಣೆ



(ಹಿಂದಿನ ಪುಟದಿಂದ) ... ಲಿವರ್ಪೂಲ್ ಶಾಲೆಯ ಪುಟ್ಟ ವಿಧ್ಯಾರ್ಥಿಗಳಿಂದ "ದೊಡ್ಡವರೆಲ್ಲಾ ಜಾಣರಲ್ಲ " ಹಾಡಿಗೆ ಮಾಡಿದ ನೃತ್ಯರೂಪಕ ಪ್ರೇಕ್ಷಕರನ್ನೆಲ್ಲಾ ಮನರಂಜಿಸಿತು. ಪ್ರತಿಯೊಬ್ಬ ವಿದ್ಯಾರ್ಥಿಯೂ ಕೂಡ ವೇದಿಕೆ ಮೇಲೆ ಬಂದು ಕನ್ನಡದಲ್ಲಿ ಹಾಸ್ಯ, ಹಾಡು, ಮಾತು ಕಥೆ ನಡೆಸಿಕೊಟ್ಟರು. ಕಟ್ಟ ಕಡೆಗೆ, ಊಟ ತಿಂಡಿಯ ಹೆಸರುಗಳನ್ನು ಒಳಗೊಂಡ ಹಾಡನ್ನು ಹೇಳಿ ಎಲ್ಲರನ್ನು ನಗೆಗಡಲಲ್ಲಿ ಮುಳುಗಿಸಿದರು. ಪೋಷಕರು ಮತ್ತು ಗುರುಗಳು ಮಕ್ಕಳ ಕನ್ನಡ ಕಲಿಕೆಯನ್ನು ಪ್ರತ್ಯಕ್ಷವಾಗಿ ಹೆಮ್ಮೆಯಿಂದ ವೀಕ್ಷಿಸಿದರು.

ಪರಭಾಷೆ ಮಾತಾಡುವ, ಕನ್ನಡದ ಗಂದವೇ ಇಲ್ಲದ ಮಹಿಳೆಯೊಬ್ಬರು ಕನ್ನಡವನ್ನು ಅಭ್ಯಸಿಸಿ ನೆರೆದವರ ಮುಂದೆ ಎರಡು ಕನ್ನಡದ ಸಾಲುಗಳನ್ನು ಓದಿ, ಯಾವುದೂ ಅಸಾಧ್ಯವಿಲ್ಲ ಎಂದು ತೋರಿಸಿದರು.

ಮಕ್ಕಳಿಗೆ ಇಷ್ಟವಾದ ತಿಂಡಿ ತಿನಿಸುಗಳನ್ನು ಹಂಚಿ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು. ▪

ವರದಿ: ಸ್ಮಿತಾ ಮೇಲ್ಕೋಟೆ

ಚಿತ್ರಗಳು: ಕನಕಾಪುರ ನಾರಾಯಣ

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಹೊಸತನ್ನೇನಾದರೂ ಕಂಡಾಗ ನಮ್ಮ ಮನಸ್ಸಿಗೆ ಆಗುವ ಅಥವಾ ಆಗಬೇಕಾದ ಪ್ರತಿಕ್ರಿಯೆ "ಸೋಜಿಗ", "ಬೆರಗು", "ಆನಂದ". ಅದು ಬಿಟ್ಟು ಅದು ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸುತ್ತಿದೆ ಅಂದರೆ, ಆ ವಸ್ತು ಹೊಸತೋ ಅಲ್ಲವೋ ಅನ್ನುವುದಕ್ಕಿಂತ ನಮ್ಮ ಮನಸು ಹಳತಾಗುತ್ತಿದೆ ಎಂದು ತಿಳಿಯುವುದು ಉತ್ತಮ. ನಾವು ಒಳಿತಲ್ಲದ್ದಕ್ಕೆ ಸಾಮಾನ್ಯ ಪ್ರಶ್ನೆ ಮಾಡುವುದಿಲ್ಲ. ಪ್ರಶ್ನೆ ಏನಿದ್ದರೂ ಶುದ್ಧತೆಗೆ, ಸತ್ಯಕ್ಕೆ ಮಾತ್ರ ಸೀಮಿತ. ಒಂದು ಬಾರಿ ಯೋಚಿಸಿ ನೋಡಿ. ಯಾರಾದರೂ "ಹೇ, ಅವನು ಬಿಡು ತುಂಬಾ ಮೋಸಗಾರ ..." ಎಂದರೆ, ನಾವು ಸಾಮಾನ್ಯವಾಗಿ ಆ ವಾಕ್ಯಕ್ಕೆ ಇನ್ನೊಂದಿಷ್ಟು ಉಪ್ಪುಖಾರ ಹಾಕಿ, "ಹೋ, ಹೌದಲ್ವಾ, ಅವತ್ತು ನನಗೂ ಹೀಗೆ ಮಾಡಿದ್ದ ..." ಎಂದು ಒಪ್ಪಿ ಹೇಳುವುದು ವಾಡಿಕೆ. ಅದೇ, "ಅವರು ಎಷ್ಟು ಒಳ್ಳೆ ಕೆಲ್ಸ ಮಾಡ್ತಿದ್ದಾರೆ" ಎಂದು ಯಾರ ಬೆನ್ನನ್ನೇನಾದರೂ ತಟ್ಟಿದರೆ, ಆಗ ಸಂಶಯ ಶುರುವಾಗುತ್ತದೆ. "ಅದು ಯಾಕ್ ಹಾಗ್ ಮಾಡ್ತಿದ್ದಾರೆ, ಅದರಿಂದ ಏನೋ ಲಾಭ ಇರಬೇಕು ... ಇತ್ಯಾದಿ". ಈ ಮನೋಸ್ಥಿತಿ, ದೊರಕಬಹುದಾದ ಒಂದು ಒಳ್ಳೆಯ ಸ್ನೇಹವನ್ನು ಮುರುಟುತ್ತದೆ.

ಒಂದು ಚೆಂದದ ಹೂವೋ, ರಸಭರಿತ ಹಣ್ಣನ್ನೋ ನೋಡಿದಾಗ ನಮ್ಮ ಬಾಯಿಂದ ಬರಬೇಕಾದದ್ದು "ಅಬ್ಬಾ! ಏನ್ ಚೆನ್ನಾಗಿದೆ" ಎಂದು. ಹಾಗೆ ನಿಸರ್ಗ ಸೌಂದರ್ಯವನ್ನು ಸವಿಯುವ ಸಮಯದಲ್ಲಿ, ವಿಜ್ಞಾನ ಹೇಗೆ ಕೆಲಸ ಮಾಡುತ್ತಿದೆ ಎಂದು ಯೋಚಿಸುತ್ತಾ ಕುಳಿತರೆ, ಆ ಬೆರಗು ಮೂಡಿಸುವ ಸಮಯ ಕಳೆದುಹೋಗುತ್ತದೆ. ಯಾವುದನ್ನೂ ಪೂರಾ ತಿಳಿಯದೆ ಸ್ವೀಕರಿಸಿ ಎಂಬ ಬೋಧನೆ ನನ್ನದಲ್ಲ. ಆದರೆ ಯಾವ ಸಮಯದಲ್ಲಿ ಏನು ಬೇಕೋ ಆ ಕಾರ್ಯಕ್ಕೆ ಪ್ರಾಮುಖ್ಯತೆ ಕೊಡಬೇಕು ಎಂಬ ಕಳಕಳಿಯಷ್ಟೇ.

ಡಿ.ವಿ.ಜಿ ಅವರ ಈ ಕಗ್ಗವನ್ನೊಮ್ಮೆ ಪರಿಶೀಲಿಸಿ...

"ಮನಸು ಬೆಳೆಯಲಿ ಭುಜಿಸಿ ನೂರು ನೂರನುಭವವ । ಹೊನಲು ನೂರೀ ಬಾಳ ಕಡಲನುಬ್ಬಿಸಲಿ ॥

ತನುಬಂಧ ಕಳಚಿ, ಜೀವವಖಂಡಚೇತನದ । ಕುಣಿತದಲಿ ಕೂಡಿರಲಿ – ಮಂಕುತಿಮ್ಮ"

ಅಂದರೆ, ನಮ್ಮ ಮನಸ್ಸು, "ಅದು ಹಾಗೆ, ಇದು ಹೀಗೆ" ಎಂದು ವಿಮರ್ಶಿಸದೇ, ಜೀವನದ ನಿಜ ಅನುಭವ ಪಡೆದುಕೊಂಡು ಬೆಳೆಯಲಿ. ಆ ಅನುಭವದ ಬೆಳಕು ನಮ್ಮ ಬಾಳೆಂಬ ಸಾಗರವನ್ನು ಉಬ್ಬಿಸಿ (ಹಿರಿದು ಮಾಡಿ), ನಮ್ಮ ದೇಹದ ಮೇಲಿರುವ ಆಸೆಯನ್ನು ತೊಳೆದು ಸಕಲ ಜೀವಿಗಳಲ್ಲಿರುವ ಚೇತನಗಳ ಜೊತೆ ಕುಣಿಯಲಿ ಎಂದು. ಆಗ ಬರುವ ತನ್ಮಯತೆಯನ್ನು ಪದಗಳಲ್ಲಿ ವರ್ಣಿಸಲು ಅಸಾಧ್ಯವೇ ಸರಿ.

ಅಂತಹ ಒಂದು ಸ್ಥಿತಿಯಲ್ಲಿರಬೇಕಲ್ಲವೇ ಜೀವನ ! ... ಅಂತಹ ಅದಮ್ಯ ಚೇತನದೊಡನೆ ಕುಣಿದಾಡುವ ಜೀವನ ನಮ್ಮೆಲ್ಲರದಾಗಲಿ ಎಂದು ಆಶಿಸುತ್ತಾ, ಕ್ರಿಸ್ತ ಶಕ ೨೦೧೪ ರಲ್ಲಿ ಎಲ್ಲರಿಗೂ ಒಳಿತಾಗಲೆಂದು "ಚೆಲುಮೆ" ಯ ಬಳಗ ಹಾರೈಸುತ್ತದೆ ! ▪

ಆರ್ಯಭಟ ಮತ್ತು ಆರ್ಯಭಟೀಯ

ಲೇಖಕರು: ಡಾ || ಸಿ.ವಿ. ಮಧುಸೂದನ



ವೇದಗಳ ಕಾಲದಿಂದಲೂ, ಪ್ರಾಯಶಃ ಅದಕ್ಕಿಂತ ಹಿಂದಿನಿಂದಲೂ, ಭಾರತದಲ್ಲಿ ಗಣಿತಕ್ಕೆ ಹೆಚ್ಚು ಪ್ರಾಶಸ್ತ್ಯವಿದೆ. ಈ ನಿಟ್ಟಿನಲ್ಲಿ ಭಾರತದ ಅನೇಕ ಕೊಡುಗೆಗಳಲ್ಲಿ ಅತ್ಯಮೂಲ್ಯವಾದ ಎರಡನ್ನು ಹೆಸರಿಸಬಹುದು.

೧. ಸಂಖ್ಯೆ ಹತ್ತನ್ನು ಆಧಾರಿಸಿದ ಸ್ಥಾನ ಮೌಲ್ಯ ಪದ್ಧತಿ (Decimal Place Value System)

೨. ಮಿಕ್ಕ ಅಂಕೆಗಳಂತೆಯೇ ಸೊನ್ನೆಯನ್ನೂ ಒಂದು ಚಿಹ್ನೆ (೦) ಇಂದ ನಿರೂಪಿಸುವುದು.

ಸ್ಥಾನ ಮೌಲ್ಯ ಪದ್ಧತಿಯ ವಿಶೇಷವೆಂದರೆ, ಒಂದು ಅಂಕೆಯ ಬೆಲೆ ಇಷ್ಟೇ ಎಂದು ನಿರ್ದಿಷ್ಟವಲ್ಲ - ಅದರ ಬೆಲೆ ಒಂದು ಸಂಖ್ಯೆಯಲ್ಲಿನ ಆ ಅಂಕೆಯ ಸ್ಥಾನವನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ **2** ಎಂಬ ಒಂದೇ ಅಂಕೆಯು 32 ಎಂಬ ಸಂಖ್ಯೆಯಲ್ಲಿ **ಎರಡನ್ನೂ** (2×10^0), 423 ಎಂಬ ಸಂಖ್ಯೆಯಲ್ಲಿ **ಇಪ್ಪತ್ತನ್ನೂ** (2×10^1), ಮತ್ತು 1203 ಎಂಬ ಸಂಖ್ಯೆಯಲ್ಲಿ **ಇನ್ನೂರನ್ನೂ** (2×10^2) ಸೂಚಿಸುತ್ತದೆ. ಇನ್ನು ಸೊನ್ನೆಗೆ ಒಂದು ಚಿಹ್ನೆಯಿಲ್ಲದ್ದಿದ್ದರೆ 123ಕ್ಕೂ 1203ಕ್ಕೂ ವ್ಯತ್ಯಾಸವೇ ನಮಗೆ ಗೊತ್ತಾಗುತ್ತಿರಲಿಲ್ಲ! ಪ್ರಾಚೀನ ಬೇಬಿಲೋನಿಯನ್ನರೂ ಸಂಖ್ಯೆ 60 ರ ಮೇಲೆ ಆಧಾರಿತವಾದ, ಒಂದು ಬಗೆಯ ಸ್ಥಾನಮೌಲ್ಯಪದ್ಧತಿಯನ್ನು ಉಪಯೋಗಿಸುತ್ತಿದ್ದರು. ಆದರೆ ಅವರ ಪದ್ಧತಿಯಲ್ಲಿ ಸೊನ್ನೆಗೆ ಒಂದು ಚಿಹ್ನೆ ಇರಲಿಲ್ಲ, ಇದರಿಂದ ಅನೇಕ ವೇಳೆ ಗೊಂದಲಕ್ಕೆ ಕಾರಣವಾಗುತ್ತಿತ್ತು.

ಈ ಸ್ಥಾನಮೌಲ್ಯ ಪದ್ಧತಿಯು ಎಷ್ಟು ಮಹತ್ವದ್ದೂ, ಎಷ್ಟು ಪ್ರಯೋಜನಕಾರಿಯದದ್ದೂ ಎಂದು ಮನವರಿಕೆಯಾಗಬೇಕಾದರೆ, ಈ ಗುಣಾಕಾರವನ್ನು ನೋಡಿ: 888 x 44. ಇದರ ಉತ್ತರ: (888 x 4) + (888 x 40) = 3552 + 35520, ಎಂದರೆ 39072; ಎಂದು ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಕೂಡ ಸುಲಭವಾಗಿ ಹೇಳಬಲ್ಲರು. ಈಗ ಈ ಲೆಕ್ಕವನ್ನೇ ರೋಮನ್ ಅಂಕೆಗಳನ್ನು ಬಳಸಿ ಬರೆಯಿರಿ: (DCCCLXXXVIII) x (XLIV). ಈ ಗಣಿತ ಕ್ಲಿಷ್ಟವಾಯಿತೆಂದು ನಿಮಗೆ ಕೂಡಲೇ ವೇದ್ಯವಾಗುತ್ತದೆ ಅಲ್ಲವೆ? ಇದರ ಪರಿಣಮವೆಂದರೆ ಸ್ಥಾನಮೌಲ್ಯಪದ್ಧತಿಯ ಅರಿವಿರಲಿಲ್ಲದ ರೋಮನ್ನರು, ಮತ್ತು ಇತರ ದೇಶೀಯರು, ಸಣ್ಣ ಪುಟ್ಟ ಲೆಕ್ಕಗಳಿಗೂ ತಜ್ಞರನ್ನೇ ಮರೆಹೋಗಬೇಕಾಗಿತ್ತು. ಒಂದು ಮಾತಿನಲ್ಲಿ ಹೇಳಬೇಕೆಂದರೆ ವಾಣಿಜ್ಯ, ವಿಜ್ಞಾನ, ಗಣಕ ಯಂತ್ರಗಳು ಮುಂತಾದ ಯಾವ ಕ್ಷೇತ್ರಗಳಲ್ಲೂ ಈಗಾಗಿರುವಷ್ಟು ಪ್ರಗತಿ ಸಾಧ್ಯವಾಗುತ್ತಿರಲಿಲ್ಲ. ಇದಕ್ಕಾದರೂ ಇಡೀ ಜಗತ್ತೇ ಭಾರತಕ್ಕೆ ಚಿರಋಣಿಯಾಗಿರಬೇಕು.

ಗಣಿತ ಮತ್ತು ಖಗೋಳಶಾಸ್ತ್ರಗಳಿಗೇ ಮೀಸಲಾದ ಮತ್ತು ಈಗ ನಮಗೆ ದೊರಕಿರುವ ಭಾರತೀಯ ಗ್ರಂಥಗಳಲ್ಲಿ, ಆರ್ಯಭಟನು ರಚಿಸಿರುವ ಆರ್ಯಭಟೀಯವೇ ಅತ್ಯಂತ ಪ್ರಾಚೀನವಾದದ್ದು. ಇದು ಕೇವಲ ೧೨೧ ಶ್ಲೋಕಗಳನ್ನೊಳಗೊಂಡ ತುಂಬ ಚಿಕ್ಕ ಗ್ರಂಥ. ಇದನ್ನು ಸ್ಥೂಲವಾಗಿ ಮೂರು ಭಾಗಗಳಾಗಿ ವಿಂಗಡಿಸಬಹುದು - ಆರಂಭದ ದೇವತಾ ಪ್ರಾರ್ಥನೆ ಮತ್ತು ಪರಿಸಮಾಪ್ತಿಯ ಮೂರು ಶ್ಲೋಕಗಳು; ದಶಗೀತಿಕ ಎಂಬ ಹತ್ತು ಶ್ಲೋಕಗಳು; ಮತ್ತು ಆರ್ಯಾಷ್ಟಶತವೆಂಬ ೧೦೮ ಶ್ಲೋಕಗಳು. ಆರ್ಯಾಷ್ಟಶತದಲ್ಲಿ ಮೂರು ಉಪಭಾಗಗಳಿವೆ: ಕೇವಲ ಗಣಿತಕ್ಕೆ ಮೀಸಲಾದ 'ಗಣಿತಪಾದ' (೩೩ ಶ್ಲೋಕಗಳು); ಕಾಲಮಾಪನಕ್ಕೆ ಸಂಬಂಧಿಸಿದ 'ಕಾಲಕ್ರಿಯ' (೨೫ ಶ್ಲೋಕಗಳು); ಮತ್ತು ಖಗೋಳಶಾಸ್ತ್ರವನ್ನು ಕುರಿತಾದ 'ಗೋಲ' (೫೦ ಶ್ಲೋಕಗಳು).

ಆರ್ಯಭಟೀಯದ ಸೂತ್ರಗಳನ್ನು ತುಂಬ ಸಂಕ್ಷೇಪವಾಗಿ ಬರೆದಿರುವುದರಿಂದ ಇವುಗಳಲ್ಲಿ ಅನೇಕವನ್ನು ಟಿಪ್ಪಣಿ (commentary) ಅಥವಾ ಕರಣ ಗ್ರಂಥ (manual) ಇಲ್ಲದೆ ಅರ್ಥಮಾಡಿಕೊಳ್ಳುವುದು ಕಷ್ಟ. ಆರ್ಯಭಟನೇ ಒಂದು ಕರಣ ಗ್ರಂಥವನ್ನು ಬರೆದಿದ್ದಿರಬಹುದು - ಆದರೆ ಅದು ಲಭ್ಯವಿಲ್ಲ. ಕ್ರಿ.ಶ. ೧೫ನೆಯ ಶತಮಾನದಲ್ಲಿದ್ದ ಮಹೇಶ್ವರ ಎಂಬ ಭಾಷ್ಯಕಾರನು (commentator) ಸಂಸ್ಕೃತ ಗದ್ಯದಲ್ಲಿ ಆರ್ಯಭಟೀಯಕ್ಕೆ 'ಭಟದೀಪಿಕಾ' ಎಂಬ ಬಹುಮೂಲ್ಯ ಟಿಪ್ಪಣಿಯನ್ನು ಬರೆದಿರುತ್ತಾನೆ. ಆದರೆ ಕೆಲವು ವೇಳೆ ಮಾತ್ರ ಈತನು ತನ್ನದೇ ಆದ ಅಭಿಪ್ರಾಯಕ್ಕೆ ತಕ್ಕಂತೆ ಮೂಲ ಶ್ಲೋಕವನ್ನು ಅರ್ಥೈಸಿರುವಂತೆ ತೋರುತ್ತದೆ. ಇದಲ್ಲದೆ ಆರ್ಯಭಟನ ನಂತರ ಬಂದ ಬ್ರಹ್ಮಗುಪ್ತ, ಭಾಸ್ಕರ ಮುಂತಾದ ಅತ್ಯಂತ ಮೇಧಾವಿಗಳೂ ಆರ್ಯಭಟೀಯವನ್ನು ಅನೇಕ ಸಲ ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿದ್ದಾರೆ.

<u>ಗಣಿತಪಾದದ</u> ಮೊದಲನೆಯ ಶ್ಲೋಕದಿಂದಲೇ ಆರ್ಯಭಟನು ಕುಸುಮಪುರದ (ಪಾಟಲೀಪುತ್ರದ) ನಿವಾಸಿ ಎಂದು ತಿಳಿಯುತ್ತದೆ, ಆದರೆ ಮೂಲತಃ ಈತನು ಕೇರಳದವನೆಂದು ಕಾಣುತ್ತದೆ. <u>ದಶಗೀತಿಕಾಸಾರದ</u> ಮೂರನೆಯ ಶ್ಲೋಕ ಮತ್ತು <u>**ಕಾಲಕ್ರಿಯೆಯ**</u> ಹತ್ತನೆಯ ಶ್ಲೋಕವನ್ನು ಜೊತೆಗೆ ಓದಿದಾಗ, ಆರ್ಯಭಟೀಯವನ್ನು ಬರೆದಾಗ ಮಹಾಭಾರತ ಯುದ್ಧವಾಗಿ ೩೬೦೦ ವರ್ಷಗಳಾಗಿದ್ದವೆಂದೂ ಆಗ ಲೇಖಕನಿಗೆ ೨೩ ವರ್ಷಗಳಾಗಿದ್ದವೆಂದೂ ತಿಳಿಯುತ್ತದೆ.

ಮುಂದಿನ ಪುಟ ನೋಡಿ ...

ಮಹಾಭಾರತ ಯುದ್ಧವಾದದ್ದು ಕ್ರಿ. ಪೂ. ೩೧೦೨ ರಲ್ಲಿ - ಎಂದರೆ ಆರ್ಯಭಟೀಯವನ್ನು ರಚಿಸಿದ್ದು ಕ್ರಿ.ಶ. ೪೯೯ ರಲ್ಲಿ ಮತ್ತು ಆರ್ಯಭಟನ ಜನನವಾದದ್ದು ಕ್ರಿ.ಶ. ೪೭೬ ರಲ್ಲಿ.

ಗ್ರಂಥ ಚಿಕ್ಕದಾದರೂ, ಆರ್ಯಭಟೀಯದಲ್ಲಿ ಇಂದಿಗೂ ಗಮನಾರ್ಹವಾದ ವಿಷಯಗಳು ಹೇರಳವಾಗಿವೆ, ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉಲ್ಲೇಖಿಸಬಯಸುತ್ತೇನೆ:

· ಮೇಲೆ ಹೇಳಿದ ಸ್ಥಾನಮೌಲ್ಯಪದ್ಧತಿಯನ್ನು ಆರ್ಯಭಟನು ತನ್ನ **ಗಣಿತಪಾದದ** ಎರಡನೆಯ ಶ್ಲೋಕದಲ್ಲಿರುವ **'ಸ್ಥಾನಾತ್ ಸ್ಥಾನಂ ದಶಗುಣಂ ಸ್ಯಾತ್'** ಎಂಬ ಪದಬಂಧದಿಂದ ಸೂಚಿಸುತ್ತಾನೆ.

· **ಗಣಿತಪಾದದ** ೪ ಮತ್ತು ೫ ನೆಯ ಶ್ಲೋಕಗಳಲ್ಲಿ ವರ್ಗಮೂಲ ಮತ್ತು ಘನಮೂಲಗಳನ್ನು (square and cube roots) ಕಂಡು ಹಿಡಿಯುವ ಬಗೆಯನ್ನು ತಿಳಿಸುತ್ತಾನೆ

· **ಗಣಿತಪಾದದ** ಹತ್ತನೆಯ ಶ್ಲೋಕವನ್ನು ನೋಡಿರಿ:

ಚತುರಧಿಕಂ ಶತಮಷ್ಟಗುಣಂ ದ್ವಾಷಷ್ಟಿಸ್ತಥಾ ಸಹಸ್ರಾಣಾಮ್
ಅಯುತದ್ವಯ ವಿಷ್ಕಂಭಸ್ಯಾಸನ್ನೋ ವೃತ್ತ ಪರಿಣಾಹಃ ॥

ಇದರ ಅರ್ಥ ಹೀಗಿದೆ; ನೂರಕ್ಕೆ ನಾಲ್ಕನ್ನು ಸೇರಿಸಿ ಅದನ್ನು ಎಂಟರಿಂದ ಗುಣಿಸಿ ನಂತರ ಅದಕ್ಕೆ ಅರುವತ್ತೆರಡು ಸಾವಿರವನ್ನು ಸೇರಿಸಿದರೆ, ಅದು ಇಪ್ಪತ್ತು ಸಾವಿರ (ಅಯುತ ಎಂದರೆ ಹತ್ತು ಸಾವಿರ) ವ್ಯಾಸವಿರುವ ವೃತ್ತದ ಪರಿಧಿಗೆ ಸುಮಾರು ಸಮವಾಗುತ್ತದೆ. ಎಂದರೆ:

104 x 8 + 62000 = 62832 ≈ circumference of a circle of diameter 20000
But, circumference = π x diameter
Therefore, π ≈ 62832/20000 = 3.1416

ಆರ್ಯಭಟನು ಇಲ್ಲಿ ಕೊಟ್ಟಿರುವ 'ಪೈ' ನ ಮೌಲ್ಯವು, ಆರ್ಖಿಮಿಡೀಸ್ ಮುಂತಾದ ವಿಜ್ಞಾನಿಗಳು ಬಳಸುತ್ತಿದ್ದ (22/7) ಗಿಂತ ಹೆಚ್ಚು ನಿಖರವಾಗಿದ್ದರೂ, ಇದೂ ಸಹ ಕರಾರುವಾಕ್ಕಾದದ್ದಲ್ಲ ಎಂದು 'ಆಸನ್ನೋ' (ಸುಮಾರು) ಎಂಬ ಪದದಿಂದ ಸೂಚಿಸಿದ್ದಾನೆ!

· ಪ್ರಾಚೀನಕಾಲದಲ್ಲಿ ಭಾರತೀಯರು ಗ್ರಹಣವಾಗುವಾಗ ರಾಹು ಎಂಬ ರಾಕ್ಷಸನು ಸೂರ್ಯ ಚಂದ್ರರನ್ನು ನುಂಗುತ್ತಾನೆ ಎಂದು ನಂಬಿದ್ದರು. ಆದರೆ ಆರ್ಯಭಟೀಯದಲ್ಲಿನ **ಗೋಲದ** ಮೂವತ್ತೇಳನೆಯ ಶ್ಲೋಕದ ಎರಡನೆಯ ಸಾಲು ಹೀಗಿದೆ:

ಛಾದಯತಿ ಶಶೀ ಸೂರ್ಯಂ ಶಶಿನಂ ಮಹತೀ ಚ ಭೂಚ್ಛಾಯಾ

ಇದನ್ನು ಟಿಪ್ಪಣಿಕಾರ ಪರಮೇಶ್ವರನು ಈ ರೀತಿ ವಿವರಿಸುತ್ತಾನೆ: **'ಸೂರ್ಯಂ ಗ್ರಹಣಕಾಲೇ ಶಶೀ ಛಾದಯತಿ ನ ತು ರಾಹುಃ, ಶಶಿನಂ ಗ್ರಹಣಕಾಲೇ ಛಾದಯತಿ ಮಹತೀ ಭೂಚ್ಛಾಯಾ ನ ತು ರಾಹುಃ.'** ಎಂದರೆ ಸೂರ್ಯಗ್ರಹಣವು ಚಂದ್ರನ ನೆರಳಿನಿಂದಲೂ, ಚಂದ್ರಗ್ರಹಣವು ಭೂಮಿಯ ನೆರಳಿನಿಂದಲೂ ಆಗುತ್ತವೆ, ರಾಹು ಎಂಬ ರಾಕ್ಷಸನಿಂದಲ್ಲ.

· ಹಿಂದಿನ ಕಾಲದಲ್ಲಿ ಪಾಶ್ಚಾತ್ಯ, ಪೌರಾತ್ಯರೆಲ್ಲರೂ ಭೂಮಿಯು ಸ್ಥಿರವಾಗಿದೆ - ಸೂರ್ಯ ಮತ್ತು ನಕ್ಷತ್ರಗಳೆಲ್ಲವೂ ಅದರ ಸುತ್ತ ಸುತ್ತುತ್ತವೆ ಎಂದು ತಿಳಿದಿದ್ದರು. ಆದರೆ ಆರ್ಯಭಟನು ಭೂಮಿಯೇ ತನ್ನ ಅಕ್ಷದ ಮೇಲೆ ತಿರುಗುತ್ತಿದೆ - ದೋಣಿಯಲ್ಲಿ ಪಯಣ ಮಾಡುತ್ತಿರುವವನಿಗೆ ಸ್ಥಿರವಸ್ತುಗಳೆಲ್ಲವೂ ಹಿಂದೆ ಹಿಂದೆ ಹೋದಂತೆ ಕಾಣುವಂತೆ, ಸ್ಥಿರವಾಗಿರುವ ನಕ್ಷತ್ರಗಳೂ ವಿರುದ್ಧ ದಿಕ್ಕಿನಲ್ಲಿ ಹೋದಂತೆ ನಮಗೆ ಭಾಸವಾಗುತ್ತದೆ ಎಂದು ತಿಳಿಸುತ್ತಾನೆ (**ಗೋಲ, 9**). ಈ ಸತ್ಯವನ್ನು ಅಂಗೀಕರಿಸಲು ಯೂರೋಪಿಯನ್ನರಿಗೆ ಸಾವಿರಕ್ಕೂ ಹೆಚ್ಚಿನ ವರ್ಷಗಳು (ಗೆಲಿಲೆಯೋನ ಕಾಲದವರೆಗೂ) ಬೇಕಾದವು!

ಆರ್ಯಭಟೀಯದಿಂದ ಇನ್ನೂ ಅರಿಯಬೇಕಾದ ವಿಷಯಗಳು ಅನೇಕವಿವೆ. ಆರ್ಯಭಟನ ಕೆಲವು ಸಿದ್ಧಾಂತಗಳು ಸನಾತನ ನಂಬಿಕೆಗಳಿಗೆ ಎದುರಾಗಿದ್ದುದರಿಂದ ಆತನು ಬ್ರಹ್ಮಗುಪ್ತ ಮುಂತಾದವರಿಂದ ಅನೇಕ ಟೀಕೆಗಳಿಗೆ ಒಳಗಾದನು. ಆರ್ಯಭಟೀಯದಲ್ಲಿ ಕೆಲವು ತಪ್ಪುಗಳೂ ಇವೆ - ಉದಾಹರಣೆಗೆ ಗೋಲದ ಗಾತ್ರವನ್ನು (volume of sphere) ಕಂಡುಹಿಡಿಯುವ ಸೂತ್ರ ಸರಿಯಲ್ಲ. ಗ್ರಹಗಳ ವ್ಯಾಸದ ಬಗ್ಗೆ ಆರ್ಯಭಟನು ಕೊಟ್ಟಿರುವ ಮಾಹಿತಿಯೂ ಕರಾರುವಾಕ್ಕಾದುದಲ್ಲ. ಆದರೆ ಈ ಕೃತಿಯನ್ನು ರಚಿಸಿದಾಗ ಟೆಲಿಸ್ಕೋಪುಗಳೇ ಇರಲಿಲ್ಲವೆಂಬುದನ್ನು ನೆನಪಿನಲ್ಲಿಡಬೇಕು. ಈ ಹಿನ್ನೆಲೆಯಲ್ಲಿ ನೋಡಿದರೆ ಆರ್ಯಭಟನು ತನ್ನ ಸಮಕಾಲೀನರಿಗಿಂತ ಬಹಳ ಮುಂದುವರಿದಿದ್ದನು ಎಂದು ನಿಸ್ಸಂದೇಹವಾಗಿ ಹೇಳಬಹುದು. ▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

2013 ಅವಾರ್ಡ್ಸ್

ಪ್ರಿಯ ವೀಕ್ಷಕರೇ, ಈಗ ನಿಮ್ಮ ಮುಂದೆ ಮೂಡಿಬರಲಿದೆ 2013 annual awards ಘೋಷಿಸುವ ಕಾರ್ಯಕ್ರಮ. ಈ ವರ್ಷದ ಅಮೋಘ ಸಾಧಕರ, ಸಮಯಸಾಧಕರ ಪಟ್ಟಿಯನ್ನ ಈಗ ನಿಮ್ಮ ಮುಂದೆ ಇಡ್ತಾ ಇದ್ದೀವಿ.

ಮೊಟ್ಟಮೊದಲಿಗೆ, ಅವಾರ್ಡ್ ನಂಬರ್ ಒನ್ ಗೋಸ್ ಟು ಆಡಿಸಿ ನೋಡು, ಬೀಳಿಸಿ ನೋಡು ಉರುಳಿಹೋಗದು ಅಂತ ಏನೇ ಬಂದರೂ ತಮ್ಮ ಸ್ಥಾನವನ್ನು ಭದ್ರವಾಗಿ ಉಳಿಸಿಕೊಂಡು ಬಂದಿರುವ ಮೌನ್‌ಮೋಹನ್‌ಜೀಯವರಿಗೆ! ಇವರಿಗೆ ಸತತ ಹತ್ತನೆಯ ಬಾರಿ 'ವರ್ಷದ ಅತ್ಯುತ್ತಮ ತೊಗಲುಗೊಂಬೆ' ಪ್ರಶಸ್ತಿಯನ್ನು ನೀಡುತ್ತಿದ್ದೇವೆ. ಹೀ ಈಸ್ ದ ಓನ್ಲಿ ಒನ್ ಟು ಟೇಕ್ ದಿಸ್ ಫಾರ್ ಟೆನ್ ಕನ್ಸಿಕ್ಯುಟಿವ್ ಇಯರ್ಸ್. ಹತ್ತು ವರ್ಷ ಸತತವಾಗಿ ಈ ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವ ಏಕೈಕ ವ್ಯಕ್ತಿ ಇವರು. ಇಟ್ ಈಸ್ ಎ ವರ್ಲ್ಡ್ ರೆಕಾರ್ಡ್. ಈ ಪ್ರಶಸ್ತಿಯ ಪ್ರಾಯೋಜಕರು ಭಾರತ್ ಕರಪ್ಷನ್ ಕಾರ್ಪೊರೇಷನ್ ಅನ್‌ಲಿಮಿಟೆಡ್.

ನೆಕ್ಸ್ಟ್ ಪ್ರಶಸ್ತಿ, ಮುಂದಿನ ಅವಾರ್ಡ್... ಈ ತೊಗಲುಬೊಂಬೆಯಾಟಕ್ಕೆ ಹಿನ್ನೆಲೆಯಾಗಿ ಮೂಡಿಬರುತ್ತಿದ್ದ 'ಇಟಲಿ ರಾಣಿ ಬೋಲೋ ಬೋಲೋ ಕೈಸಾ ಆದೇಶ್ ದೇತೀ ಹೋ ತುಮ್, ವೈಸೇ ಹೀ ಮೈ ಕರ್ಲೂಂಗಾ ಪಾರ್ಟಿ ದೇಶ್ ಸಂಭಾಲೋ ತುಮ್' ಗೀತೆಗೆ! ಈ ಹಾಡಿಗೆ ಈ ವರ್ಷದ ಶ್ರೇಷ್ಠ ಹಿನ್ನೆಲೆ ಗೀತೆ ಪ್ರಶಸ್ತಿಯನ್ನು ಕೊಡಮಾಡುತ್ತಿದ್ದೇವೆ. ಈ ಗೀತೆಯನ್ನು ರಚಿಸಿದ ಅಮ್ಮಾ ವೃಂದದವರಿಗೆ ಈ ಅವಾರ್ಡ್ ನೀಡಲಾಗುತ್ತದೆ. ಈ ಪ್ರಶಸ್ತಿಯ ಪ್ರಾಯೋಜಕರು ಹೈಕಮಾಂಡ್ ಫಾಲೋಯರ್ಸ್ ಅಸೋಸಿಯೇಷನ್, ನವದೆಹಲಿ.

ಹುಟ್ಟು ಆಕಸ್ಮಿಕ, ಸಾವು ಖಚಿತ. ಆದರೆ ಪ್ರಪಂಚದಲ್ಲಿ ಕೆಲವರು ಮಾತ್ರ ಇಚ್ಛಾಮರಣದ ವಿದ್ಯೆ ಕಲಿತಿರುತ್ತಾರೆ. ನಮ್ಮ ಘನವೆತ್ತ ಕನ್ನಡನಾಡಿನ ಘನವೆತ್ತ ಅರಿವಿನ ಮಣೆ ಏರಿ ಕುಳಿತಿರುವ ಸಾಹಿ(ಯಿ)ತಿಗಳು 'ಅವನು ಪ್ರಧಾನಿ ಆದರೆ ನಾನು ಬದುಕಿರಲು ಬಯಸುವುದಿಲ್ಲ, ಇವನು ಮಂತ್ರಿಯಾದರೆ ಜೀವಿಸುವುದು ದುಃಸಾಧ್ಯ' ಎಂದು ನುಡಿದು ತಮ್ಮ ಸಾವಿಗೆ ಮುಹೂರ್ತ ಫಿಕ್ಸ್ ಮಾಡಿಕೊಳ್ಳುವ ತಯಾರಿಯಲ್ಲಿದ್ದಾರೆ. ತಮ್ಮ ಸಾವಿಗೆ ತಾವೇ ಕಂಕಣ ಕಟ್ಟಿಕೊಳ್ಳುವ ಸಾಮರ್ಥ್ಯವುಳ್ಳ ಶ್ರೀ ಅನಂತಯ್ಯನವರಿಗೆ ಈ ವರ್ಷದ 'ಇಚ್ಛಾಮರಣಿ ಭೀಷ್ಮ ಅವಾರ್ಡ್' ಲಭಿಸಿದೆ. ವೀಕ್ಷಕರೆ ಈ ಪ್ರಶಸ್ತಿ ಪಡೆಯಲು ಅವರು ಯಾವುದೇ ಲಾಬಿ ನಡೆಸಿಲ್ಲ ಎಂದು ಈ ಮೂಲಕ ಸ್ಪಷ್ಟಪಡಿಸುತ್ತೇವೆ. ಈ ಅವಾರ್ಡ್‌ನ ಪ್ರಾಯೋಜಕರು ಯಮ್.ರಾಜ್ ಗ್ರೂಪ್ ಆಫ್ ನರ್ಸಿಂಗ್ ಹೋಂಸ್.

'ಕುಲಕುಲಕುಲವೆಂದು ಅರ್ಜಿ ನೀಡುತಿರಿ, ನಿಮ್ಮ ಅಹಿಂದ ಕುಲದ ಪವರಾದರು ಬಲ್ಲಿರಾ ಬಲ್ಲಿರಾ..' ಎಂದು ಹಾಡುತ್ತಾ ಹಿಂದೂಸ್ಥಾನದ ಉದ್ಧಾರಕ್ಕಿಂತಲೂ ಅಹಿಂದಸ್ಥಾನದ ಉದ್ಧಾರಕ್ಕೆ ಪಣ ತೊಟ್ಟಿರುವ, ಆಣೆ-ಪ್ರಮಾಣಗಳನ್ನು ಮಾಡಿ, ಸಾಧುಸಂತರ ಆಶೀರ್ವಾದ ಪಡೆದು, ಅಧಿಕಾರವೇರಿ, ಮೂಢನಂಬಿಕೆಯ ವಿರುದ್ಧ ಮಸೂದೆ ತರಬೇಕೆಂದು ಹೇಳಿಯೂ ಸಂಪೂರ್ಣ ಕಾಲ ಅಧಿಕಾರದಲ್ಲಿ ಉಳಿಯುವರೆಂಬ ಮೂಢನಂಬಿಕೆ ಹೊಂದಿರುವ ಸನ್ಮಾನ್ಯ ಪ್ರಮುಖಮಾತ್ಯ ಸಿದ್ದುರವರಿಗೆ 'ಕೋಮುವರ್ಧನ' ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಈ ಪ್ರಶಸ್ತಿಯನ್ನು ಕೋಮು ಸೌಹಾರ್ದಕ್ಕೆ ಹೆಸರಾದ ಪ್ರಮೋದ್ ಮುತಾಲಿಕ್ ಸಂಘ ಪ್ರಾಯೋಜಿಸುತ್ತದೆ.

'ಅನ್ನ ಭಾಗ್ಯ', 'ಶಾದಿ ಭಾಗ್ಯ', 'ಹಾದಿ ಭಾಗ್ಯ', 'ರದ್ದಿ ಭಾಗ್ಯ' ಇತ್ಯಾದಿ ಭಾಗ್ಯಗಳ ಬಾಗಿಲನ್ನೇ ತೆರೆದಿರುವುದಕ್ಕೆ ಹಾಲಿ ಮುಖ್ಯಮಂತ್ರಿಗಳಿಗೆ 'ಭಾಗ್ಯಶ್ರೀ ಪ್ರಶಸ್ತಿ' ಲಭಿಸಿದೆ. ಆದರೆ 'ಹನಿಮೂನ್ ಭಾಗ್ಯ', 'ಬಾಣಂತನ ಭಾಗ್ಯ', 'ಬೇಬಿ ನರ್ಸರಿ ಭಾಗ್ಯ' ಪರಿಚಯಿಸುವವರೆಗೆ ಈ ಪ್ರಶಸ್ತಿ ಕೊಡುವುದನ್ನು ಸ್ಟಾಪ್ ಮಾಡಲಾಗಿದೆ.

ತನ್ನ ಗುರುವಿನ ನೆರಳಲ್ಲೇ ಸಾಗಿ, ಅವರು ನಡೆದಂತೆಯೇ ನಡೆದು, ಅವರು ರಗ್ ಮೇಲೆ ಕುಳಿತರೆ ಅವರ ಮುಂದೆ ಕುಳಿತು ಅವರ ಮಾತುಗಳನ್ನು ಕೇಳಿ, ಅವರು ಎದ್ದು ನಿಂತಾಗ ರಗ್ ಎಳೆದು ತಾನು ಅದರಲ್ಲಿ ಕುಳಿತುಕೊಳ್ಳಲು ಹವಣಿಸಿ, ರೆಡಿ ಆಗಿ, ಜನರಿಗೆ ಮೋಡಿ ಮಾಡಿರುವ ಗುಜರಾತಿ ಪ್ರಮುಖ ಮೋಡಿಕಾರನಿಗೆ 'ಕಾಲೆಳೆದು ಮಣ್ಣುಕ್ಕಿಸುವ ಪ್ರವೀಣ' ಪ್ರಶಸ್ತಿ ದೊರಕಿದೆ. ಇದನ್ನು ಆಲ್ ಇಂಡಿಯಾ ಪೊಲಿಟಿಕಲ್ ಕಬಡ್ಡಿ ಅಸೋಸಿಯೇಷನ್ ಪ್ರಾಯೋಜಿಸುತ್ತಿದೆ.

ಮುಂದಿನ ಪುಟ ನೋಡಿ ...

ನಿಜವಾಗ್ಲೂ ಬಾರು ಗಂಡ್ಮಕ್ಳ ತವರು ಎಂಬ ಅಮೋಘ ಸತ್ಯವನ್ನು ಅನಾವರಣಗೊಳಿಸಿದ ಯೋಗರಾಜಭಟ್ಟರಿಗೆ 'ಪಡ್ಡೆಗಳ ಬಗ್ಗೆ ಅತ್ಯುತ್ತಮ ಸಂಶೋಧನಾ ಪ್ರಶಸ್ತಿ' ನೀಡಲಾಗುತ್ತಿದೆ. ಇದನ್ನು ಅಖಿಲ ಭಾರತ ಪಡ್ಡೆ ಕುಡುಕರ ಸಂಘ ಪ್ರಾಯೋಜಿಸುತ್ತಿದೆ.

ಸೋಲು ಸಾಧ್ಯವೇ ಇಲ್ಲ, ಭಾರತಕ್ಕೇ ಗೆಲುವು ಎಂದಿದ್ದು, ಎದುರಾಳಿ ತಂಡ ಕೈ ಚೆಲ್ಲಿ ಕುಳಿತಿದ್ದಾಗ ಕೇವಲ ಒಂದೇ ಒಂದು ಓವರ್ನಲ್ಲಿ ಮೂವತ್ತು ರನ್ ಇತ್ತ ಇಶಾಂತ್ ಶರ್ಮರಿಗೆ 'ತ್ಯಾಗಿವೇಗಿ' ಪ್ರಶಸ್ತಿ ಲಭಿಸಿದೆ. ಈ ರನ್ನುಗಳನ್ನು ತಾನು ಸ್ವಯಂ ಇಚ್ಛೆಯಿಂದ ನೀಡಿರುವುದಾಗಿಯೂ, ಇದಕ್ಕೆ ಯಾವುದೇ ಹಣವನ್ನು ಪಡೆದಿಲ್ಲವೆಂದೂ ಶರ್ಮ ಹೇಳಿಕೆ ನೀಡಿರುವರಂತೆ. ಈ ಪ್ರಶಸ್ತಿಯನ್ನು ಅಖಿಲ ಭಾರತ ಎದುರಾಳಿ ತಂಡಗಳ ಅಭಿಮಾನಿಗಳ ಸಂಘ ನೀಡುತ್ತಿದೆ.

ಈ ವರ್ಷ ಅಪಾರ ಜನಪ್ರಿಯತೆ ಗಳಿಸಿದ Tainted criminals shall not contest elections ಹೆಸರಿನ ನಾಟಕವು ವರ್ಷದ ಅತ್ಯುತ್ತಮ ನಾಟಕ ಪ್ರಶಸ್ತಿ ಪಡೆದುಕೊಂಡಿದೆ. ಈ ನಾಟಕದಲ್ಲಿ ಪೋಷಕ ಪಾತ್ರದಲ್ಲಿ ಅಭಿನಯಿಸಿದ್ದ ಸೋನಿಯಾಜೀ, ಪ್ರಮುಖ ವಿಲನ್ ಪಾತ್ರಧಾರಿ ಸಿಂಗ್ ಮತ್ತು ನಾಯಕನ ಪಾತ್ರದಲ್ಲಿ ಮಿಂಚಿದ ರಾಹುಲರಿಗೆ ಕ್ರಮವಾಗಿ ಅತ್ಯುತ್ತಮ ಪೋಷಕ ನಟ, ಅತ್ಯುತ್ತಮ ವಿಲನ್ ಮತ್ತು ಅತ್ಯುತ್ತಮ ನಟ ಪ್ರಶಸ್ತಿಗಳು ಲಭಿಸಿವೆ. ಈ ಪ್ರಶಸ್ತಿಯನ್ನು ಅಭಾಉಭೌರೌ(ಅಖಿಲ ಭಾರತ ಉಗ್ರರ, ಭಯೋತ್ಪಾಕರ, ರೌಡಿಗಳ) ಅಭಿಮಾನಿಗಳ ಸಂಘದವರು ಪ್ರಾಯೋಜಿಸಿದ್ದಾರೆ.

ಹಾಗೇ ದೇಶದ ಇತರ ಭಾಗಗಳಲ್ಲಿದ್ದು ದೇಶದ ಹೆಸರನ್ನು ಎಲ್ಲೆಡೆ ಹರಡುವ ಕೆಲಸ ಮಾಡಿದ ಹುಲ್ಲೂ ಪ್ರಸಾದ್ ಯಾದವ್ರಿಗೆ ಕುಪ್ರತಿಷ್ಠಿತ ಮೇವೇಶ್ವರ ಅವಾರ್ಡ್ ನೀಡಲಾಗಿದೆ. ಈ ಪ್ರಶಸ್ತಿಯ ಪ್ರಾಯೋಜಕರು ಸಿಡಬ್ಲ್ಯೂಜಿ ಕೋಲ್ಗೇಟ್ ಬಿ.ಎನ್. ಸಂಘ. ಬಿ.ಎನ್ ಅಂದರೆ ಭ್ರಷ್ಟಾಚಾರ ನಿರತ ಅನ್ನೋದು ನಿಮಗೆಲ್ಲಾ ತಿಳಿದಿರೋದೇ ಅಲ್ಲವೇ...

ಈ ವರ್ಷದ ಅತ್ಯುತ್ತಮ ವಕೀಲ ಪ್ರಶಸ್ತಿ ಟಿ.ಎನ್. ಸೀತಾರಾಂಗೆ ಸಲ್ಲುತ್ತದೆ. ಇಡೀ ವರ್ಷ, ಅಷ್ಟೇ ಏಕೆ, ಇಡೀ ಜೀವಮಾನದಲ್ಲೇ ಒಂದೇ ಒಂದು ಕೇಸೂ ಸೋಲದಿರುವ ಧೀರರಾದ ಇವರಿಗೆ ಸಿಎಸ್ಪಿ (ಕೇಸ್ ಸಕ್ಸೀಡಿಂಗ್ ಪ್ರಾಸಿಕ್ಯೂಟರ್) ಪ್ರಶಸ್ತಿ ನೀಡಲಾಗಿದೆ. ಈ ಪ್ರಶಸ್ತಿಯನ್ನು ಅಖಿಲಭಾರತ ವಿಫಲ ವಕೀಲೀ ಸಂಘವು ಪ್ರಾಯೋಜಿಸಿದೆ.

ಈ ಪ್ರಶಸ್ತಿಗಳಲ್ಲದೆ ಇನ್ನೂ ಕೆಲವು ಪ್ರಶಸ್ತಿಗಳಿದ್ದು, ಅವುಗಳ ಹೆಸರು, ಪಡೆದವರ ಪಟ್ಟಿ ಈಗ ನಿಮ್ಮ ಮುಂದೆ ಮೂಡಿ ಬರಲಿದೆ.

ಹೆಸರು	ಪ್ರಶಸ್ತಿಯ ಹೆಸರು	ಪ್ರಾಯೋಜಕರು
ಎಡ್ಡಿ	ದೂರ್ವಾಸ ಪ್ರಶಸ್ತಿ	ಬಿ.ಪಿ. ಅಪ್ಪಾರೇಟಸ್ ಮ್ಯಾನುಫ್ಯಾಕ್ಚರರ್ಸ್ ಲಿಮಿಟೆಡ್
ಶೋಭಾ ಕರಂದ್ಲಾಜೆ	ಕೋಲ್ಗೇಟ್ ಪ್ರಶಸ್ತಿ	ಭಾರತ್ ಟೂತ್ ಪೇಸ್ಟ್ ಪ್ರೊಡ್ಯೂಸರ್ಸ್ ಲಿಮಿಟೆಡ್
ವಿಶ್ವನಾಥನ್ ಆನಂದ್	ಹಂಪೆ ಅವಾರ್ಡ್ (ವೈಭವ ಗತವಾದುದಕ್ಕೆ)	ಚೆಕ್ ಮೇಟ್ & ಚೆಕ್ ಬೌನ್ಸ್ ಅಸೋಸಿಯೇಟ್ಸ್
ದೇವೇಗೌಡರು	ಉಡ ಪ್ರಶಸ್ತಿ	ಜೆಡಿಎಸ್ & ಸನ್ಸ್
ನರೇಂದ್ರ ಶರ್ಮಾ	ಪಿಂಡ ಪ್ರಶಸ್ತಿ	ಭವಿಷ್ಯದಲ್ಲಿ ಭೂತ ಕಂಡವರ ಸಂಘ
ಅಡ್ವಾಣಿ	ರಥಭಂಗ ಅವಾರ್ಡ್	ಮೋದಿ ಲೆಗ್ ಪುಲ್ಲರ್ಸ್ ಇಂಕ್
ಅಣ್ಣಾ ಹಝಾರೆ	ವ್ಯಾನಿಷಿಂಗ್ ಆಕ್ಟ್ ಅವಾರ್ಡ್	ಭ್ರಷ್ಟಾಚಾರ್ಸ್ ಸಿಂಡಿಕೇಟ್
ರಾಬರ್ಟ್ ವದ್ರಾ	ಮನೆ ತೊಳೆಯುವ ಅಳಿಯ ಅವಾರ್ಡ್	ಸೋನಂ ಸಿಂಡಿಕೇಟ್
ಅರವಿಂದ್ ಕೇಜ್ರೀವಾಲ್	ಭ್ರಷ್ಟಾಚಾರ ಸಪೋರ್ಟ್ ಅವಾರ್ಡ್	ಕರಪ್ಷನ್ ಸಿಂಡಿಕೇಟ್ ಆಫ್ ಇಂಡಿಯಾ
ಮಾಸ್ಟರ್ ಹಿರಣ್ಣಯ್ಯ	ಟ್ರಂಪೆಟ್ ಅವಾರ್ಡ್	ಶ್ರೀಸಾಮಾನ್ಯರ ಒಕ್ಕೂಟ (ಎಂದೂ ಸೇರದ)
ರಾಮ್	ಅಧಿಕಪ್ರಸಂಗಿ ಅವಾರ್ಡ್	ನಾನು ಮತ್ತು ನಾನು ಮತ್ತು ನಾನು

ಈ ಎಲ್ಲಾ ಪ್ರಶಸ್ತಿಗಳನ್ನು 2014ರ ಫೆಬ್ರವರಿ 29ರಂದು ನಿಮ್ಮ ಹತ್ತಿರದ ಸಭಾಂಗಣದಲ್ಲೇ ನೀಡಲಿದ್ದೇವೆ. ದೇರ್ ವಿಲ್ ಬಿ ಎ ಲೈವ್ ಕವರೇಜ್ ಆಫ್ ದ ಈವೆಂಟ್ ಟೂ. ತಪ್ಪದೆ ವೀಕ್ಷಿಸಿ, ಪಾಲ್ಗೊಳ್ಳಿ, ಮರೆಯಬೇಡಿ. ಟೆಲ್ ದೆನ್ ಗುಡ್ಬೈ!!! ▪

ವಿನಂತಿ

ಆಸರೆ - ವಿಶೇಷ ಮಕ್ಕಳ ವಸತಿ ಶಾಲೆಗೆ ದೇಣಿಗೆ

ಕುಮಾರಿ ಎಂ ಜೆ ಅರ್ಚನಾ 20ನೇ ಫೆಬ್ರವರಿ 1985 ರಂದು ಕರ್ನಾಟಕ ರಾಜ್ಯದ ಮಣಿಪಾಲದಲ್ಲಿ ಜನಿಸಿದರು. ತಂದೆ ಜೈವಿತಲ್ ಹಾಗೂ ತಾಯಿ ವಿಜಯಲಕ್ಷ್ಮಿ. ಅವಳು 18ತಿಂಗಳಿದ್ದಾಗಲೇ ಸ್ವಾಮಿ ವಿವೇಕಾನಂದ ಕೇಂದ್ರದಲ್ಲಿ ಯೋಗ ತರಬೇತಿ ಪಡೆದಿದ್ದಾರೆ. ನಂತರ ಮಣಿಪಾಲದ ಮಾಧವಕೃಪ ಶಾಲೆಯಲ್ಲಿ ಎಲ್‌ಕೆಜಿ ಮತ್ತು ಯುಕೆಜಿ ಶಿಕ್ಷಣ, ವಿಕಸನಾ ಶಾಲೆಯಲ್ಲಿ ನಾಲ್ಕು ವರ್ಷ, ಉಡುಪಿ ಜಿಲ್ಲೆಯ ಪಾಂಬೂರಿನಲ್ಲಿರುವ ಮಾನಸ ವಿಶೇಷ ಶಾಲೆಯಲ್ಲಿ ಏಳು ವರುಷ ವಿಶೇಷ ಶಿಕ್ಷಣ ಪಡೆದರು. ಪ್ರಸ್ತುತ ಇವರು ಮಣಿಪಾಲ ವಿಶ್ವ ವಿದ್ಯಾನಿಲಯ ಹಾಗೂ ಅರ್ಚನಾ ಟ್ರಸ್ಟ್ ಅಧೀನದಲ್ಲಿರುವ **ಆಸರೆ**-ವಿಶೇಷ ಮಕ್ಕಳ ವಸತಿ ಶಾಲೆಯ ವಿದ್ಯಾರ್ಥಿನಿ. ಅರ್ಚನಾಳ ಹೆಸರಿನಲ್ಲಿ ಪೋಷಕರು, ಕುಟುಂಬದವರು ಹಾಗೂ ಹಿತೈಷಿಗಳು ವಿಶೇಷ ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಅರ್ಚನಾ ಟ್ರಸ್ಟ್ ಎಂಬ ಸಂಸ್ಥೆಯನ್ನು 2008ರಲ್ಲಿ ಹುಟ್ಟುಹಾಕಿದ್ದಾರೆ.

ಅರ್ಚನಾಳ ದಿನಚರಿ ಮುಂಜಾನೆ 5ಕ್ಕೆ ಮಣಿಪಾಲದ ಮರೆನಾ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ನಲ್ಲಿ ಜಾಗಿಂಗ್ ನಿಂದ ಪ್ರಾರಂಭವಾಗುತ್ತದೆ. ನಂತರ ಕಸ್ತೂರ್ಬಾ ಆಸ್ಪತ್ರೆಯ ವೈದ್ಯಕೀಯ ದಾಖಲೆ ವಿಭಾಗದಲ್ಲಿ ಸ್ವಯಂ ಸೇವಕಿಯಾಗಿ ಕಾರ್ಯ ನಿರ್ವಹಿಸುತ್ತಾರೆ. ಮಧ್ಯಾಹ್ನ ಆಸರೆಯಲ್ಲಿ ವಿಶೇಷ ಮಕ್ಕಳಿಗೆ ಊಟವನ್ನು ವಿತರಿಸುವ ಹಾಗೂ ಕೆಲವು ಮಕ್ಕಳಿಗೆ ಊಟ ಮಾಡಿಸುತ್ತಾರೆ. ಮಧ್ಯಾಹ್ನ ಭೋಜನದ ನಂತರ ಕರಕುಶಲ ವಿಭಾಗದಲ್ಲಿ ವಿಶೇಷ ಮಕ್ಕಳ ಜೊತೆಗೆ ಪೇಪರ್ ಬ್ಯಾಗ್ ಮತ್ತು ವಿವಿಧ ರೀತಿಯ ಹೂವುಗಳ ತಯಾರಿಕೆಯಲ್ಲಿ ತೊಡಗಿಸಿ ಕೊಳ್ಳುತ್ತಾರೆ. ಸಂಜೆ 4.30ರಿಂದ 6.30ರ ವರೆಗೆ ಈಜಿಗಾಗಿ ಮೀಸಲಿಟ್ಟಿದ್ದಾರೆ. ನಂತರ 7 ಗಂಟೆಗೆ ಮಕ್ಕಳೊಂದಿಗೆ ಪ್ರಾರ್ಥನೆ ಹಾಗೂ ನಂತರ ರಾತ್ರಿ ಭೋಜನ ಹಾಗೂ ವಿಶ್ರಾಂತಿ. ಇದಲ್ಲದೆ ಪೋಲಿಯೋ ಜಾಗೃತಿ, ಚುನಾವಣಾ ಜಾಗ್ರತಿ, ಅನೇಕ ಮ್ಯಾರಥಾನ್ ಗಳಲ್ಲಿ ಸ್ವಯಂ ಸೇವಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಕುಮಾರಿ ಅರ್ಚನಾಳ ಸಾಧನೆ

1. **ಏಷ್ಯಾ ಫೆಸಿಫಿಕ್ ಗೇಮ್ಸ್ ನಲ್ಲಿ ಫ್ರೀಸ್ಟೈಲ್ ಹಾಗೂ ಮೆಡ್ಲೆ ರೀಲೆಯಲ್ಲಿ ಎರಡು ಕಂಚಿನ ಪದಕ**
2. **ಕರ್ನಾಟಕ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ -2012**
3. **ಮೈಕೆಲ್ ಫೆಲ್ಪ್ಸ್ ಫೌಂಡೇಶನ್ ರವರ ಸಾಧನಾ ಪ್ರಶಸ್ತಿ**

ಕುಮಾರಿ ಅರ್ಚನಾರವರು ಈಜು ಸ್ಪರ್ಧೆಯಲ್ಲಿ ಮಾಡಿದ ಸಾಧನೆ:

1. 2013 ಡಿಸೆಂಬರ್ 1ರಿಂದ 6ರ ತನಕ ಆಸ್ಟ್ರೇಲಿಯಾದ ನ್ಯೂ ಕ್ಯಾಸಲ್ ನಗರದಲ್ಲಿ ನಡೆದ ಅಂತರರಾಷ್ಟ್ರೀಯ ಮಟ್ಟದ ವಿಶೇಷ ಒಲಿಂಪಿಕ್ಸ್(ಏಷ್ಯಾ ಫೆಸಿಫಿಕ್ ಗೇಮ್ಸ್) ಈಜು ಸ್ಪರ್ಧೆಯಲ್ಲಿ 25 ಹಾಗೂ 50 ಮೀಟರ್ ಫ್ರೀಸ್ಟೈಲ್‌ನಲ್ಲಿ ನಾಲ್ಕನೇ ಸ್ಥಾನವನ್ನು ಹಾಗೂ 4x25 ಮೀಟರ್ ಫ್ರೀಸ್ಟೈಲ್ ರೀಲೆಯಲ್ಲಿ ಕಂಚಿನ ಪದಕ ಹಾಗೂ 4x50 ಮೀಟರ್ ಮೆಡ್ಲೆ ರೀಲೆಯಲ್ಲಿ ಕಂಚಿನ ಪದಕವನ್ನು ಪಡೆದು ನಮ್ಮ ದೇಶ ಹಾಗೂ ಕರ್ನಾಟಕದ ಕೀರ್ತಿಯನ್ನು ವಿದೇಶದಲ್ಲಿ ಮೆರೆದಿದ್ದಾರೆ.

2. 2005 ರ ಮುಂಬಯಿಯಲ್ಲಿ ನಡೆದ ಭಾರತ್ ಸ್ಪೆಶಲ್ ಒಲಿಂಪಿಕ್ಸ್ ನ್ಯಾಶನಲ್ ಗೇಮ್ಸ್ ನ ಈಜು ಸ್ಪರ್ಧೆಯಲ್ಲಿ ಭಾಗವಹಿಸುವಿಕೆ
3. 2009 ರ ಮುಂಬಯಿಯಲ್ಲಿ ನಡೆದ ಭಾರತ್ ಸ್ಪೆಶಲ್ ಒಲಿಂಪಿಕ್ಸ್ ನ್ಯಾಶನಲ್ ಗೇಮ್ಸ್ ನ ಬ್ರೆಸ್ಟ್ ಸ್ಟ್ರೋಕ್ ಈಜು ಸ್ಪರ್ಧೆಯಲ್ಲಿ ಸ್ವರ್ಣ ಪದಕ
4. 2009 ರ ಮುಂಬಯಿಯಲ್ಲಿ ನಡೆದ ಭಾರತ್ ಸ್ಪೆಶಲ್ ಒಲಿಂಪಿಕ್ಸ್ ನ್ಯಾಶನಲ್ ಗೇಮ್ಸ್ ನ ಫ್ರೀ ಸ್ಟೈಲ್ ಈಜು ಸ್ಪರ್ಧೆಯಲ್ಲಿ ರಜತ ಪದಕ
5. 2009 ರ ಮುಂಬಯಿಯಲ್ಲಿ ನಡೆದ ಭಾರತ್ ಸ್ಪೆಶಲ್ ಒಲಿಂಪಿಕ್ಸ್ ನ್ಯಾಶನಲ್ ಗೇಮ್ಸ್ ನ ರೀಲೆ ಈಜು ಸ್ಪರ್ಧೆಯಲ್ಲಿ ಕಂಚಿನ ಪದಕ
6. ಮಾನಸ ಪಾಂಬೂರ್ ನಲ್ಲಿ 2004ರಲ್ಲಿ ನಡೆದ ಭಾರತ್ ಸ್ಪೆಶಲ್ ಒಲಿಂಪಿಕ್ಸ್ ನ ಬ್ರೆಸ್ಟ್ ಸ್ಟ್ರೋಕ್ ಈಜು ಸ್ಪರ್ಧೆಯಲ್ಲಿ ಮೊದಲ ಸ್ಥಾನ

7. ಮಾನಸ ಪಾಂಬೂರ್ ನಲ್ಲಿ 2004ರಲ್ಲಿ ನಡೆದ ಭಾರತ್ ಸ್ಪೆಶಲ್ ಒಲಿಂಪಿಕ್ಸ್ ನ ರೀಲೆ ಈಜು ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ
8. ಮಾನಸ ಪಾಂಬೂರ್ ನಲ್ಲಿ 2004ರಲ್ಲಿ ನಡೆದ ಭಾರತ್ ಸ್ಪೆಶಲ್ ಒಲಿಂಪಿಕ್ಸ್ ನ ಫ್ರೀ ಸ್ಟೆಲ್ ಈಜು ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ
9. ಮಾನಸ ಪಾಂಬೂರ್ ನಲ್ಲಿ 2004ರಲ್ಲಿ ನಡೆದ ಭಾರತ್ ಸ್ಪೆಶಲ್ ಒಲಿಂಪಿಕ್ಸ್ ಗೇಮ್ಸ್ ನ ರೀಲೆ ಈಜು ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ

2. ಬೋಚೆಯಲ್ಲಿ ಕುಮಾರಿ ಅರ್ಚನಾಳ ಸಾಧನೆ:

1. 2006 ರಲ್ಲಿ ಮಂಗಳೂರಿನಲ್ಲಿ ನಡೆದ ಭಾರತ್ ಸ್ಪೆಶಲ್ ಒಲಿಂಪಿಕ್ಸ್ ಬೋಚೆ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ
2. 2007 ರಲ್ಲಿ ಮೈಸೂರಿನಲ್ಲಿ ನಡೆದ ಭಾರತ್ ಸ್ಪೆಶಲ್ ಒಲಿಂಪಿಕ್ಸ್ ಬೋಚೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ
3. 2012 ರಲ್ಲಿ ಮಂಗಳೂರಿನಲ್ಲಿ ನಡೆದ ಜಿಲ್ಲಾ ಮಟ್ಟದ ಬೋಚೆಯಲ್ಲಿ ಪ್ರಥಮ ಸ್ಥಾನ

3. ಇತರ ಸ್ಪರ್ದೆಗಳು:

1. 2011ರಲ್ಲಿ ಮಣಿಪಾಲದಲ್ಲಿ ನಡೆದ ಮಿನಿಸ್ಟ್ರಿ ಆಫ್ ಯೂತ್ ಅಫೆರ್ಸ್ ಹಾಗೂ ಸ್ಪೋರ್ಟ್ಸ್ ಅಂಡ್ ಗೇಮ್ಸ್ ನಲ್ಲಿ ಸಾಪ್ಟ್ ಬಾಲ್ ನಲ್ಲಿ ತೃತೀಯ ಸ್ಥಾನ
2. ವಿಕಲಚೇತನರು ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಆಯೋಜಿಸಿದ ಮ್ಯುಜಿಕಲ್ ಚೇರ್ ನಲ್ಲಿ ದ್ವೀತಿಯ ಸ್ಥಾನ
3. 2007ರಲ್ಲಿ ಮೈಸೂರಿನಲ್ಲಿ ನಡೆದ ಸ್ಪೆಷಲ್ ಒಲಿಂಪಿಕ್ಸ್ ನ 100 ಮೀಟರ್ ಓಟದಲ್ಲಿ ದ್ವಿತೀಯ ಸ್ಥಾನ.

ಆಸರೆ - ಇದೊಂದು ಮಣಿಪಾಲ ಯುನಿವರ್ಸಿಟಿ ಮತ್ತು ಅರ್ಚನಾ ಟ್ರಸ್ಟಿನ ಜಂಟಿ ಯೋಜನೆಯಾಗಿದ್ದು ಇದೊಂದು ಮಂದ ಬುದ್ದಿ ವಿಕಲಚೇತನರ ಶಾಲೆ, ಪುನರ್ವಸತಿ ಕೇಂದ್ರ, ವೃತ್ತಿ ತರಬೇತಿ ಕೇಂದ್ರ ಹಾಗೂ ವಸತಿಯುತ ಶಾಲೆಯಾಗಿದೆ. 2008 ರಲ್ಲಿ ಅರ್ಚನಾಟ್ರಸ್ಟ್ (ನೊಂದಣಿಸಂಖ್ಯೆ: 119/5/07-08) ಸ್ಥಾಪನೆಗೊಂಡಿತು. ಆಸರೆ 15ನೇ ಜೂನ್ 2009ರಂದು ಐದು ಮಕ್ಕಳೊಂದಿಗೆ ಪ್ರಾರಂಭವಾಗಿ ಪ್ರಸ್ತುತ 43 ವಿಶೇಷ ಮಕ್ಕಳನ್ನು ಒಳಗೊಂಡಿದೆ, ಇದು ಎಲ್ಲಾ ಸುಸಜ್ಜಿತ ವ್ಯವಸ್ಥೆಗಳನ್ನು ಒಳಗೊಂಡ ಮಾದರಿ ಸಂಸ್ಥೆಯಾಗಿದೆ. ಆಸರೆಯಲ್ಲಿ ಮೈಲ್ಡ್, ಮಾಡರೇಟ್, ಸಿವಿಯರ್, ಆಟಿಸಮ್ ಹಾಗೂ ಪ್ರೊಫೌಂಡ್ ಮಕ್ಕಳು ಇದ್ದಾರೆ.

ಹಲವಾರು ಗಣ್ಯವ್ಯಕ್ತಿಗಳು ನಮ್ಮ ಆಸರೆಗೆ ಭೇಟಿಕೊಟ್ಟು ಇಲ್ಲಿಯ ವ್ಯವಸ್ಥೆಯನ್ನು ಶ್ಲಾಘಿಸಿದ್ದಾರೆ.

<u>ನಮ್ಮ ಮುಂದಿನ ಯೋಜನೆಗಳು</u>:

1. ಆಟಿಸಂ ಸೆಂಟರ್ ಅಂದಾಜು ವೆಚ್ಚ ಸುಮಾರು 25 ಲಕ್ಷ
2. ಮಲ್ಟಿ ಪರ್ಪಸ್ ಹಾಲ್ (ವಿವಿಧೋದ್ದೇಶ ಸಂಭಾಗಣ) 32 ಲಕ್ಷ

ಆಸರೆಯ ಕಟ್ಟಡ ವೆಚ್ಚವನ್ನು ಶೇಕಡಾ 50ರಷ್ಟು ಮಣಿಪಾಲ ವಿಶ್ವವಿದ್ಯಾನಿಲಯವು ಭರಿಸುತ್ತದೆ ಉಳಿದ 50 ಶೇಕಡಾವನ್ನು ಅರ್ಚನಾಟ್ರಸ್ಟ್ ಭರಿಸ ಬೇಕಾಗುತ್ತದೆ

ಈ ಸಂಸ್ಥೆ ಯು ಇನ್ನೂ ಅಭಿವೃದ್ಧಿ ಹೊಂದಲು ತಮ್ಮೆಲ್ಲರ ಪ್ರೋತ್ಸಾಹ ಹಾಗೂ ಸಹಾಯಹಸ್ತ ಬೇಕಾಗಿದೆ. ಈ ವಿದ್ಯಾರ್ಥಿನಿಯ ಸಂಸ್ಥೆಗೆ ಸಹಾಯ/ಪ್ರೋತ್ಸಾಹ ಮಾಡಲಿಚ್ಚಿ ವ್ಯಕ್ತಿಗಳು ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಬಹುದು.

Website: http://www.archanatrust.org

Bank Account No: 02322200046925
IFSC Code: SYNB0000232
Bank: Syndicate Bank, KMC Branch, Manipal -576104
Phone: +91 9845540293 (Jaivittal, President ASARE),
+91 9742503805

ಕಥಾ ಚಿಲುಮೆ

ಜಾಡಿ

ಲೇಖಕರು: ಕನಕಾಪುರ ನಾರಾಯಣ

ಫಿಲಾಸಫಿ ಪ್ರೊಫೆಸರ್ ಒಬ್ಬ ತನ್ನ ತರಗತಿಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ,ತನ್ನ ಬಳಿಯಿದ್ದ ಗಾಜಿನ ಜಾಡಿಯಲ್ಲಿ ದಪ್ಪ ಹಾಗೂ ನುಣುಪಾದ ನದಿಯಲ್ಲಿ ಸಿಗುವ ಕಲ್ಲುಗಳನ್ನು ತುಂಬಿದ."ಮಕ್ಕಳೇ, ಈಗ ನೋಡಿ ಜಾಡಿ ತುಂಬಿದೆಯಲ್ಲವೇ?" ಮಕ್ಕಳು ಹೂ ಎಂದು ತಲೆ ಆಡಿಸಿದರು. ನಂತರ ಕಡಲೆ ಗಾತ್ರದ ಸಣ್ಣ ಸಣ್ಣ ಕಲ್ಲುಗಳನ್ನು ಅದೇ ಜಾಡಿಗೆ ಸುರಿದ,ಜಾಡಿ ಅಲ್ಲಾಡಿಸಲು ಸಣ್ಣ ಕಲ್ಲುಗಳು ದೊಡ್ಡಕಲ್ಲುಗಳ ಸಂಧಿಯಲ್ಲಿ ನುಸುಳಿದವು."ಮಕ್ಕಳೇ, ಈಗ ನೋಡಿ ಜಾಡಿ ತುಂಬಿದೆಯಲ್ಲವೇ?"ಅಂದ.ಮಕ್ಕಳು ಒಪ್ಪಿದರು. ನಂತರ ಪ್ರೊಫೆಸರ್ ಒಂದು ಚೀಲದಲ್ಲಿ ಇದ್ದ ಮರಳನ್ನು ಆ ಜಾಡಿಗೆ ಸುರಿದನು.ಮರಳು ಕಲ್ಲುಗಳ ಸಂದುಗೊಂದುಗಳನ್ನು ಹೊಕ್ಕು ಜಾಡಿ ಭರ್ತಿಯಾಯಿತು.ಮತ್ತದೇ ಪ್ರಶ್ನೆ "ಈಗ ನೋಡಿ ಜಾಡಿ ತುಂಬಿದೆಯಲ್ಲವೇ?" ಮಕ್ಕಳು "ಹೂ ಹೌದು" ಎಂದರು.

ಆಗ ಪ್ರೊಫೆಸರ್ ಹೇಳಿದ "ಮಕ್ಕಳೇ ಗಮನವಿಟ್ಟು ಕೇಳಿ. ಈ ಜಾಡಿಯೇ ನಿಮ್ಮ ಜೀವನ ಅಂದುಕೊಳ್ಳಿ, ಕಲ್ಲುಗಳೇ ಬಹು ಮುಖ್ಯವಾದ ಸಂಸಾರ,ಸಂಗಾತಿ,ಆರೋಗ್ಯ,ಮಕ್ಕಳು ಇದ್ದಹಾಗೆ.ನೀವು ಎಲ್ಲಾ ಕಳೆದುಕೊಂಡರೂ ಇವರು ನಿಮ್ಮೊಡನೇ ಇರುತ್ತಾರೆ ಆಗಲೂ ನಿಮ್ಮ ಜೀವನ(ಜಾಡಿ)ಪೂರ್ತಿಯಾಗೇ ಇರುತ್ತದೆ.ಇನ್ನು ಸಣ್ಣ ಕಲ್ಲುಗಳು ನಿಮ್ಮ ಭೋಗ-ಭಾಗ್ಯಗಳು, ಆಸ್ತಿ-ಅಂತಸ್ತುಗಳು,ಇನ್ನು ಮರಳು ಅತಿ ಸಣ್ಣ ಸಣ್ಣ ವಿಷಯ/ವಸ್ತುಗಳು.ನೀವು ಮರಳನ್ನೇ ಇಡೀ ಜಾಡಿಗೆ ತುಂಬಿಕೊಂಡರೆ ಬೇರೆ ಯಾವುದಕ್ಕೂ ಸ್ಥಳವೇ ಇಲ್ಲದಂತಾಗುತ್ತದೆ" ಎಂದ.▪

ಬಾಳೇ ಸಣ್ಣಪ್ಪ

ಬೇಕಾಗುವ ಸಾಮಗ್ರಿಗಳು

- ಬೆಳ್ತಿಗೆ ಅಕ್ಕಿ ಎರಡು ಲೋಟ
- ಬೆಲ್ಲದ ಪುಡಿ ಎರಡೂವರೆ ಲೋಟ
- ಇಡೀ ಅರಳು ಎರಡು ಲೋಟ
- ಬಾಳೆಹಣ್ಣು ಎರಡು
- ಕಾಯಿತುರಿ ಒಂದು ಲೋಟ
- ಎರಡು ಚಿಟಿಕೆ ಉಪ್ಪು
- ಕರಿಯಲು ಎಣ್ಣೆ

ಮಾಡುವ ವಿಧಾನ

- ಅಕ್ಕಿಯನ್ನು ತೊಳೆದು ಅರ್ಧಗಂಟೆ ನೆನೆಸಿ
- ನೀರನ್ನು ಬಸಿದು, ಅರಳು ಕಾಯಿತುರಿ ಬಾಳೆಹಣ್ಣು ಹಾಕಿ ಸಣ್ಣಗೆ ರುಬ್ಬಿ
- ಕೊನೆಯಲ್ಲಿ ಬೆಲ್ಲ ಉಪ್ಪು ಹಾಕಿ ತಿರುವಿ
- ನಿಂಬೇಗಾತ್ರದ ಉಂಡೆ ಮಾಡಿ ಎಣ್ಣೆಯಲ್ಲಿ ಕರೆಯಿರಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಇದೇನ್ಲಾ ಇದು

೧. ಹಳಸಲಾರದ ಹಣ್ಣು, ಕಾಯಿಸಲಾರದ ತುಪ್ಪ
೨. ಸಾಗರ ಪುತ್ರ, ಸಾರಿನ ಮಿತ್ರ

ಉತ್ತರಕ್ಕೆ ಪುಟ ೧೦ ನೋಡಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: **horanadachilume@gmail.com**

SRI KRISHNA TRAVEL
Travel with a Smile
Contact Mr Sudheendra Rao EMAIL
Mobile 0415 291 723

choice HOME LOANS
Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.
Contact Mr Umesh EMAIL
Mobile 0401 034 456

AUSTINDIA SANGAM TRANSPORT
Contact Mr Eranna Gotyal EMAIL
Mobile 0404 215 605

ಯಾರಿವರು ...

ಹೀಗೆಯೆ ಇವರೆಲ್ಲರೂ!
ನೀರಿನಂತೆ ಹರಿಯುವರು - ಒಡಲ ಬೇಗೆ ತಣಿಸುವರು
ಪೈರಿನಂತೆ ಬೆಳೆಯುವರು - ಹೂವಿನಂತೆ ಮೆಲ್ಲನರಳಿ
ಪರಿಮಳವನು ಕೊಡುವವರು

ಹೀಗೆಯೆ ಇವರೆಲ್ಲರೂ!
ಗಾಳಿಯಂತೆ ತೇಲುವರು - ಕಡಲಿನಂತೆ ಮೊರೆಯುವರು
ರವಿಯ ತೆರದಿ ಬೆಳಗುವರು - ಇರುಳ ತಾರೆಯಂತೆ ಹೊಳೆದು
ಎದೆಗೆ ಬೆಳಕ ತರುವವರು

ಹೀಗೆಯೆ ಇವರೆಲ್ಲರೂ!
ಹಾಲಿಗೆ ಸಿಹಿ ಬೆರೆಸುವರು - ಜೇನುತುಪ್ಪ ಉಣಿಸುವರು
ನಾಳೆಯ ಕದ ತೆರೆಯುವರು - ಬರುವ ಎಲ್ಲ ನೋವ ಸರಿಸಿ
ಬಾಳ ಕಹಿಯ ಮರೆಸುವರು

ಹೀಗೆಯೆ ಇವರೆಲ್ಲರೂ!
ಎಂದೂ ಇಲ್ಲೆ ಇರುವವರು - ನಗುವನಷ್ಟೇ ತರಿಸುವವರು
ನೊಂದು ಬೆಂದು ಮಾಗುವರು - ಗಂಧದಂತೆ ತಾವೇ ತೇಯ್ದು
ಅಂದವನ್ನು ತೋರುವರು

ಹೀಗೆಯೆ ಇವರೆಲ್ಲರೂ!
ಮಾತಾಡುವ ದೇವತೆಗಳು! - ನಡೆದಾಡುತ ಕಾಯ್ದುರು!
ಕೋಟಿ ಜನಕೆ ಕೆಲವರು - ಹೇಳಲು ಇನ್ನೇನಿದೆ!
ಇವರ ಹೆಸರೆ ಗೆಳೆಯರು.

ರಚನೆ: ಮಾಲು (ಅಡಿಲೈಡ್)

ಹಾಸ್ಯ ಚಿಲುಮೆ

ಗಂಡ ಹೆಂಡಿರ ಜಗಳ ಗಂಡ
"ನಾನು ಹೊರಟು ಹೋದರೆ ನನ್ನಂಥಾ ಗಂಡ ಹುಡುಕಿದರೂ ನಿನಗೆ ಸಿಕ್ಕಲ್ಲ ನೋಡ್ತಿರು"
ಹೆಂಡ್ತಿ "ನಿನ್ನಂಥಾ ಗಂಡನ್ನ ಹುಡುಕೋದಾದ್ರೂ ಯಾರು?"

ಹೆಂಡತಿ ಕಾವಲಿಯ ಮೇಲೆ ದೋಸೆ ಹಾಕುತ್ತಿರಲು ಗಂಡ ಅಲ್ಲಿಗೆ ಬಂದು
"ಏಯ್ ಸ್ವಲ್ಪ ತಾಳು ಬಿಸಿ ಆಗ್ಲಿ, ಈಗ ಹಾಕು ಎಣ್ಣೆ ಹಾಕು ಸರಿಯಾಗಿ ಹಿಟ್ಟು ಕಲಕಿ ಕಲಕಿ ಸೌಟು ಸುರಿ, ತಿರುವು, ಹಾಗೆ, ಅಲ್ಲ ನಿಧಾನ ,ತಟ್ಟೆ ಮುಚ್ಚು,ತಾಳು ತಟ್ಟೆ ತೆಗಿ, ಇಲ್ಲ ಇನ್ನೂ ಆಗಿಲ್ಲ, ಈಗ ಸರಿಯಾಗಿ ಕೆಂಪಗೆ ಆಗಿಲ್ಲ ಗರಿಗರಿ ಆಗಬೇಕು...."
ಹೆಂಡತಿಗೆ ರೇಗಿತು
"ಏನ್ರಿ ಯಾವತ್ತೂ ದೋಸೆನೇ ಮಾಡಿಲ್ಲ ನನಗೆ ಹೀಗೆ ಟೀಚ್ ಮಾಡ್ತಿದ್ದೀರಾ"
ಅದಕ್ಕೆ ಗಂಡ
"ನಾನು ಡ್ರೈವ್ ಮಾಡುವಾಗ ದಿನಾ ನೀನು ನನಗೆ....ಇದೇ ರೀತಿ ಅಲ್ವಾ ಟೀಚ್ ಮಾಡೋದು" ಅಂದ

ಜಾಣ ಕರ್ನಾಟಕ

೧. ಶಾಂತಿ ಸಾಗರ ಎಂಬ ಕೆರೆ ಎಲ್ಲಿದೆ? ಇದರ ವಿಶೇಷ ಏನು? ಇದು ಮತ್ತ್ಯಾವ ಹೆಸರಿನಿಂದ ಪ್ರಸಿದ್ಧವಾಗಿದೆ?
೨. ಕ್ಲೋಸ್ ಪೇಟೆ ಎಂದು ಕರೆಯಲ್ಪಡುತ್ತಿದ್ದ, ಕರ್ನಾಟಕದ ಈಗಿನ ಒಂದು ಜಿಲ್ಲಾ ಕೇಂದ್ರ ಯಾವುದು? ಈ ಊರು ಯಾವ ಉತ್ಪನ್ನ/ ಬೆಳೆಗೆ ಪ್ರಸಿದ್ಧಿಯಾಗಿದೆ?

ಸರಿ ಉತ್ತರಕ್ಕೆ ಪುಟ ೧೮ ನೋಡಿ

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಇದೇನ್ಲಾ ಇದು – ಉತ್ತರ

೧. ಹುಣಸೆ ಹಣ್ಣು, ಜೇನುತುಪ್ಪ
೨. ಉಪ್ಪು

ನವ ವರುಷ ಪ್ರಾರಂಭೆ!! ನೂತನ ಸಂಕಲ್ಪಸ್ಯ ಆವಾಹಯಾಮಿ !!

ಲೇಖಕರು: ಸ್ಮಿತಾ ಮೇಲ್ಕೋಟೆ

ಹೊಸ ವರುಷ ಬಂತಪ್ಪಾ, ಹರುಷದಿಂದ ಹೊಸ ಬಟ್ಟೆ ತೊಟ್ಟು, ಸಿಹಿ ಉಂಡು ಬರ ಮಾಡಿಕೊಂಡ್ದಿದ್ದೀರಿ. ಜೊತೆ ಜೊತೆಗೆ ರಹಸ್ಯವಾಗಿ ಹೊಸ ವರುಷದ ಸಂಕಲ್ಪಗಳನ್ನು ಕೂಡ ತಲೆ ಒಳಗೆ ಹುಳದ ಹಾಗೆ ಬಿಟ್ಟಿಕೊಂಡಿದ್ದೀರಿ. ಹುಳ ಕೊರೆಯುವುದು ನಿಮ್ಮ ತಲೆಯನ್ನು ಮಾತ್ರ ನೆನಪಿರಲಿ !!! ಸಂಕಲ್ಪ ಮಾಡುವ ಹುಮ್ಮಸ್ಸು ಮಾತ್ರ ಜೋರು, ಆದರೆ ಅದನ್ನು ವರುಷ ಪೂರ್ತಿ ಕಾಪಾಡುವ ಜವಾಬ್ದಾರಿ ಮಾತ್ರ ಅಷ್ಟಕಷ್ಟೇ !!! ಆಮೇಲೆ ಆಟಕ್ಕುಂಟು ಲೆಕ್ಕಲ್ಲಿಲ್ಲ ಅಂದ ಹಾಗೆ ಸಂಕಲ್ಪಗಳು ಪಾಪ ಮೂಲೆ ಗುಂಪಾಗಿ ಹೋಗುತ್ತವೆ.

ಅಂದ ಹಾಗೆ ಹೊಸ ವರುಷದ ಸಂಕಲ್ಪಗಳು ಹೆಂಗಸರಿಗೆ ಒಂದೇ ... ತೂಕ ಇಳಿಸಬೇಕು . ಎಷ್ಟು ಇಳಿಸಬೇಕು ಹೇಗೆ ಇಳಿಸಬೇಕು ಅದೆಲ್ಲಾ ಯೋಚನೆ ಇಲ್ಲಾ. ವರುಷಕ್ಕೊಂದು ಕೆಜಿ ಇಳಿದರು ಸರಿ ಹತ್ತಿದರೂ ಸರಿ , ಅದಕ್ಕೆಲ್ಲಾ ಅಷ್ಟೊಂದು ತಲೆ ಕೆಡಿಸಿಕೊಳ್ಳೋದು ಬೇಡ . ಇನ್ನು ಗಂಡಸರು , ಸಿಗರೇಟ್/ಮಧ್ಯ ಬಿಟ್ಟೇ ಬಿಡುತ್ತೇನೆ ಎಂದು ಭೀಷ್ಮ ಪ್ರತಿಜ್ಞೆ ತರ ಸಿಂಪಲ್ ಆಗಿ ಮಾಡಿರುತ್ತಾರೆ. ಹೊಸ ವರುಷದ ಹಿಂದಿನ ದಿನ ಬಿಡಕ್ಕಾಗಲ್ಲ ಪಾರ್ಟಿ ಗೀರ್ಟಿ ಅಂತ ಸ್ವಲ್ಪ ಬಿಜಿ . ವರ್ಷದ ಮೊದಲನೇ ದಿನ ತುಂಬಾ ಕುಡಿದ್ದಿದರೆ ಸಾಮಾನ್ಯವಾಗಿ ಯಾವ ವರುಷ ಏನು ಅನ್ನೋ ವಿಷಯಾನೇ ಸ್ವಲ್ಪ ನಿಧಾನವಾಗಿ ಅರ್ಥವಾಗುವಾಗ ಇನ್ನು ಸಂಕಲ್ಪದ ವಿಷಯ ಹೊಳೆಯುತ್ತದೆಯೇ ? ಬಿಟ್ಟಾಕಿ , ಎರಡನೇ ದಿನ ಏನಾರು ದೇವರ ಕೃಪೆಯಿಂದ ಸಂಕಲ್ಪ ಮಾಡಿದ್ದೇ ಆದರೆ , ಅದು ನೆನಪಿಗೆ ಬಂದದ್ದೇ ಆದಲ್ಲಿ ನೋಡೋಣ !!

ವಿಧ್ಯಾರ್ಥಿಗಳು ಸಾಮಾನ್ಯವಾಗಿ ಮಾಡುವುದು ಒಂದೇ ಸಂಕಲ್ಪ, ಪ್ರತಿ ದಿನವೂ ಬೆಳಿಗ್ಗೆ ಬೇಗ ಏಳುತ್ತೇನೆ . ಆಮೇಲೆ ಅಲಾರ್ಮ್ ಆಫ್ ಮಾಡುತ್ತೇನೆ. ಏನ್ರೀ ಅಲಾರ್ಮ್ ಆಫ್ ಮಾಡಿದ ಮೇಲೆ ಏನು ಮಾಡುವುದು ಎಂಬ ಸಂಕಲ್ಪ ಮುಂದಿನ ವರ್ಷ ಮಾಡಿಕೊಳ್ಳೋಣ ಬಿಡಿ. ಅಮ್ಮ ಅಪ್ಪನ ಕಾಟ ತಡೆಯಲಾಗದೆ, ಬೇಗ ಎದ್ದು ಓದಿ ಬರೆದು , ಒಳ್ಳೆ ಅಂಕಗಳನ್ನೂ ತೆಗೆದುಬಿಡೋಣ ಎಂದು ಕೆಲವು ಹುಡುಗರು ನಿರ್ಧಾರ ಮಾಡಿರಲೂ ಬಹುದು . ಅಪ್ಪ ಅಮ್ಮನಿಗೆ ಓದ್ಕೋ ಓದ್ಕೋ ಎಂಬ ಒಂದೇ ಮೂಲ ಮಂತ್ರ ಬಾಯಿ ಪಾಠ ಆಗಿರಬೇಕಾದರೆ, ಮಕ್ಕಳ ಹೊಸ ಸಂಕಲ್ಪಗಳು, ಅದರ ಗೋಳು ಯಾಕೆ ಬೇಕು ಹೇಳಿ .

ಇನ್ನು ಡಾಕ್ಟರ್ಗಳು ಏನಂತಾ ಸಂಕಲ್ಪ ಮಾಡಿರಬಹುದು ? ಇವತ್ತಿನಿಂದ ನನ್ನ ಹ್ಯಾಂಡ್ ರೈಟಿಂಗ್ ಚೆನ್ನಾಗಿ ಕಾಣುವ ಹಾಗೆ ಮಾಡುತ್ತೇನೆ . ಯಾವ ರೋಗಿ ಬೇಕಾದರು ಸಲೀಸಾಗಿ ಓದಬಹುದು !! ಲಾಯರ್ಗಳು ಏನಾದರು ಇವತ್ತಿನಿಂದ ನಾನು ಸುಳ್ಳು ಹೇಳುವುದಿಲ್ಲ ಹೇಳಿದರೆ ಸತ್ಯ ಮಾತ್ರ, ಕೇಸು ಗೆಲ್ಲಲು ಅದೃಷ್ಟದ ಮೊರೆಯೇ ಹೋಗಬೇಕು ಕ್ಲೈಂಟ್ ಮತ್ತು ಲಾಯರ್ ಇಬ್ಬರೂ !!

ಇವತ್ತಿಂದ ಕಾಫಿ ಬಿಟ್ಟು ಬಿಡುತ್ತೀನಿ , ಟೀನ ಗಟ್ಟಿಯಾಗಿ ಹಿಡ್ಕೊಂಡ್ರು ಹಿಡ್ಕೊಂಡ್ರೆ. ಸಿಹಿ ತಿನ್ನುವುದು ಬಿಟ್ಟ್ ಬಿಡ್ತೀನಿ ಅಂದುಕೊಂಡ ಮನುಷ್ಯನಿಗೆ ಒಂದು ಇರುವೆ ನೋಡಿದ್ರೂ ಸಕ್ಕರೆ ನೆನಪು ಕಾಡಬಹುದು . ಸಿಹಿ ತಿಂಡಿಗಳ ಲೋಕ, ಪಾಪ ಕನಸಲ್ಲಿ ಕಂಡು ಕಂಡು , ನಿದ್ದೆಯಿಂದಲೇ ಎದ್ದು ಸಿಹಿ ಬಾಯಾಡಿಬಿಟ್ಟರೂ ಬಿಟ್ಟನೇ!! ಅಲ್ಲಿಗೆ ಸಂಕಲ್ಪ ಮಣ್ಣು ಪಾಲು.

ಹಿಂದೆ ಕಾಶಿಗೆ ಹೋದವರು ತಮಗೆ ಇಷ್ಟವಾದ ಯಾವುದಾದರು ಪದಾರ್ಥ , ಊಟ , ತಿಂಡಿ, ತರಕಾರಿ, ಬಿಟ್ಟು ಬರಬೇಕು ಎಂಬ ಪದ್ಧತಿ ಇತ್ತು. ಆದರೆ ಈಗೀಗ ಕಾಶಿಗೆ ಹೋಗೋ ಜನವೇ ಕಮ್ಮಿ , ಅದಕ್ಕೆ ಹೊಸ ವರ್ಷದ ಸಂಕಲ್ಪದ ಹೆಸರಲ್ಲಿ ಅದು ಬಿಡು ಇದು ಬಿಡು ಅಂತ ಲೆಕ್ಕಾಚಾರ ಹಾಕ್ತ ಇರ್ತಾರೆ .

ಹೊಸ ವರ್ಷದ ಸಂಕಲ್ಪ ಮಾಡೋದೇನೋ ಸರಿ ಆದರೆ ಅದು ಗುಪ್ತವಾಗಿ ಮಾಡಿದವನ ಮನಸಲ್ಲಿ ಉಳಿಯುವ ಸಮಾಚಾರ . ಯಾವ ಪೇಪರ್ನಲ್ಲೂ, Facebook ಸ್ಟೇಟಸ್ ನಲ್ಲೂ ಬರುವುದಿಲ್ಲ, ಹತ್ತು ಜನಕ್ಕೆ ಗೊತ್ತಾದರೆ ನಾವು ಮಾಡಿರುವ ಸಂಕಲ್ಪಗಳು ಸ್ವಲ್ಪ ಧೃಡವಾಗಿ ಗಟ್ಟಿಯಾಗಬಹುದು . ಆದರೆ ಹಾಗಾಗಿರುವ ಕೇಸುಗಳು ಬಹಳ ಕಮ್ಮಿ. ಸಂಕಲ್ಪಗಳನ್ನು ಮರೆತರೆ, ಜ್ಞಾಪಿಸುವುದಕ್ಕೆ ಜನವಿಲ್ಲ, ದಾಖಲೆ ಪತ್ರವಿಲ್ಲ !!!

ಸಂಕಲ್ಪಗಳ ಸರಮಾಲೆ ಪಟಾಕಿ ಸರಮಾಲೆ ತರಹ ಬೇಗ ಪಟ್ ಪಟ್ ಅಂತ ಸಿಡಿದು ಮರೆತು ಹೋಗಬಹುದು. ಮಾಡಿರುವ ಸಂಕಲ್ಪಗಳು ಸದಾ ನೆನಪಿನಲ್ಲಿರಬೇಕಾರೆ ಒಂದು ಕಡೆ ದೊಡ್ಡ ಅಕ್ಷರಗಳಲ್ಲಿ ಬರೆದು ನೇತಾಡಿಸಿ , ಮುಕ್ಕಾಲು ಪಾಲು ಅದೂ ಕೂಡ ಅರ್ಧ ವಾರ್ಷಿಕ ಪಾಲನೆ ಮಾತ್ರ . ಹೊಸಕಿ ಹಾಕಿದ ಸಂಕಲ್ಪಗಳನ್ನು ಮರೆತು, ನಂತರ ಮತ್ತಷ್ಟು ಹೊಸ ಸಂಕಲ್ಪಗಳನ್ನು ಹುಟ್ಟಿ ಹಾಕಬಹುದು.

ಹೊಸ ಸಂಕಲ್ಪಗಳ ಹುಟ್ಟು ಸಾವು ನೋಡುತ್ತಾ ನಾವು ಪ್ರತಿ ಹೊಸ ವರುಷವನ್ನು ಸಂತೋಷದಿಂದ ಸ್ವೀಕರಿಸೋಣ. ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ

ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್

ಇವರ "ಅನಿವಾಸಿ"

ಬದರಿ ತ್ಯಾಮಗೊಂಡ್ಲು

ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ

ಇವರ "ಮಂದಹಾಸ"

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ಐದು ಪದ/ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

1.ಸಂಜೆಯ ನೇಸರನ ಬಣ್ಣದ ಪುಷ್ಪ ನಾನು

	ನ			

2. ಮನ್ನಿಸು

		ಸು

3. ಔಷಧಿಯ ಗುಣವುಳ್ಳ ಹೂ

			ಳ

4. ಹೂದೋಟ ಫಂ ಎಂದಿದೆ

		ಮ	

5. ನಿಶಾಚರ - ಇದನ್ನು ಭೂತ, ಪಿಶಾಚಿ ಎಂದೂ ಕರೆಯುತ್ತಾರೆ

ಹೊಸ ರೀತಿ

ಮೇಲಿನ ಆಯ್ದ ಅಕ್ಷರಗಳನ್ನು ಸೇರಿಸಿ ಕೆಳಗಿನ ವಾಕ್ಯಕ್ಕೆ ಅರ್ಥ ಕೊಡುವ ಉತ್ತರ ಹುಡುಕಿ

ಉತ್ತರ - ನಿಸರ್ಗವನ್ನು ಪ್ರೀತಿಸುವವ (ಒಂದಕ್ಕಿಂತ ಹೆಚ್ಚು ಪದಗಳು ಇರುಬಹುದು)

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಜನವರಿ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಡಿಸೆಂಬರ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದ ಅನೇಕ ಜನರಿಗೆ ನಮ್ಮ ಧನ್ಯವಾದಗಳು. ಅವರ ಪೈಕಿ ೨೦ಕ್ಕೂ ಹೆಚ್ಚು ಪದಗಳನ್ನ ಕಳುಹಿಸಿರುವ ಇವರಿಗೆ ನಮ್ಮ ಅಭಿನಂದನೆಗಳು.

- ಸುಮಾ ಅಶೋಕ್, ಸಿದ್ದಿ
- ಪುಷ್ಪ ನಾಗರಾಜ್, ಬೆಂಗಳೂರು
- ಶಂಕರ್, ಬೆಂಗಳೂರು
- ರಮೇಶ್ ಎನ್. ಎಸ್, ಮೈಸೂರು

ಡಿಸೆಂಬರ್ ತಿಂಗಳ ಪದಪುಂಜ

ಅ	ತು	ಪ
ಮ	ಚ	ಲೆ
ನು	ರ	ಕ

ಮೂಡಬಹುದಾದ ಹಲವು ಪದಗಳು:

ಅನು, ಅನುಪಮ, ಅಪ್, ಅಪರ, ಅಮರ, ಅಕ, ಅಕರ, ಅಚತುರ, ಅಚರ, ಅಚಲೆ, ಅರ, ಅಲೆ, ಕಚ, ಕಚಪ, ಕರ, ಕಲೆ, ಚತುರ, ಚಪ, ಚಪಲೆ, ಚಮರ, ಚಮರಕ, ಚರ, ಚರಕ, ಚರಮ, ತುರ

ಅನುಪಮಚತುರಕಲೆ

Educational, Legal, financial, Health,
Reality management services
Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
NRI SEVA
Contact Mr. Nagendra EMAIL
0401193852

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪



ರಚನೆ: ಶ್ರೀಮತಿ ತಾರಾಮಣಿ, ಬೆಂಗಳೂರು

ನೆನಪಿನ ಪಯಣ - ಸೈಕಲ್ ಯಾತ್ರೆ - ೨

ಲೇಖಕರು: ನಾಗಶೈಲ ಕುಮಾರ್

ನಾಗಶೈಲ ಕುಮಾರ್ ಭಾರತದಲ್ಲಿ ಕೈಗೊಂಡಿದ್ದ "ಸೈಕಲ್ ಪಯಣ" ದ ಅನುಭವ ಲೇಖನದ ಮುಂದಿನ ಕಂತು ...

... ನಮ್ಮ ಪ್ರವಾಸದ ಒಂದೊಂದು ದಿನವೂ ಹೊಸ ಹೊಸ ಮರೆಯಲಾಗದ ಅನುಭವಗಳ ನೀಡುತ್ತಾ, ನಮ್ಮ ಪ್ರವಾಸವನ್ನು ಹೆಚ್ಚೆಚ್ಚು ಕುತೂಹಲಕರವನ್ನಾಗಿಸುತ್ತಿತ್ತು. ದಾರಿಯುದ್ದಕ್ಕೂ ಹೆದ್ದಾರಿ ಬದಿಯ ಅಂಗಡಿಗಳವರು ಟೀ ಕಾಫಿ ಹಣ್ಣುಗಳನ್ನು ನೀಡಿ, ಆದರ ಕುತೂಹಲಗಳಿಂದ ಸತ್ಕರಿಸುತ್ತಿದ್ದರು. ಹೈದರಾಬಾದ್ ಗೆ ತಲುಪುವ ಮುನ್ನ ಹಾಲಿನ ಡೈರಿಯವರು ತೋರಿಸಿದ ವಿಶ್ವಾಸ, ಅನೇಕ ಅಂಗಡಿಗಳವರು ನೀಡಿದ ಸಹಾಯ, ನಮ್ಮ ಮುಂದಿನ ಪ್ರವಾಸಕ್ಕೆ ಉತ್ತೇಜನ ನೀಡುತ್ತಿತ್ತು. ಕೆಲವೊಮ್ಮೆ ಅವರುಗಳು ತೋರುತ್ತಿದ್ದ ಆದರ ಹೆಚ್ಚಾಗಿ, ನಮಗೆ ನಿಗದಿ ಪಡಿಸಿಕೊಂಡ ಸಮಯವನ್ನು ಪಾಲಿಸಲು ತೊಂದರೆಯೂ ಆಗುತ್ತಿತ್ತು.

ಸುಂದರವಾದ ಹೈದರಾಬಾದ್, ಸಿಕಂದರಾಬಾದ್ ನಗರಗಳನ್ನು ನಮ್ಮಣ್ಣ ಮುಂಚೆಯೇ ನೋಡಿದ್ದರಿಂದ ನಾನೊಬ್ಬನೇ ಸುತ್ತಿದೆ. ಅಂದು ಸೈಕಲ್ ಗೆ ರಜಾ. ಪ್ರಮುಖ ನಗರಗಳಲ್ಲಿ ಒಂದೊಂದು ದಿನ ಸೈಕಲ್ ಗೆ ವಿರಾಮ ದೊರೆತಾಗ, ರಿಕ್ಷಾ, ಬಸ್ ಗಳಲ್ಲಿ ನಗರವನ್ನು ಸುತ್ತುತ್ತಿದ್ದೆವು.

ಆಹಾರಕ್ಕೆ ಬಂತು ಸಂಚಕಾರ. ನಮ್ಮ ಪಯಣದಲ್ಲಿ ಮುಂದೆ ಮುಂದೆ ಹೋದಂತೆಲ್ಲಾ, ನಮ್ಮ ಆಹಾರ ಶೈಲಿಗೆ ಒದಗಿತ್ತು ಸಂಚಕಾರ. ಮೊದಲನೆಯದಾಗಿ ಸಸ್ಯಾಹಾರಿ ಆಹಾರ ದೊರೆಯುವುದು ಆಂಧ್ರದಲ್ಲಿ ಬಹಳ ಕಷ್ಟವೇ ಆಯಿತು. ಆಂಧ್ರದ ಉತ್ತರ ತುದಿಯಾದ ಅದಿಲಾಬಾದ್ ನಗರವನ್ನು ಸೇರುವ ವೇಳೆಗೆ ಹೆಚ್ಚಾದ ಬಿಸಿಲಿನ ಝಳ, ದಾಟಿ ಬಂದ ಹಲವಾರು ಘಾಟಿ ರಸ್ತೆಗಳು, ಇವುಗಳ ಜೊತೆಗೆ ಸಸ್ಯಾಹಾರಿ ಆಹಾರದ ಕೊರತೆ, ಎಲ್ಲವೂ ಸೇರಿ, ಮುಂದೇನಪ್ಪಾ ಗತಿ ಎನಿಸಿತ್ತು. ಅಂದು ರಾತ್ರಿ ಅದಿಲಾಬಾದ್ ನಗರದಲ್ಲಿ ಹೋಟೆಲ್ಗಾಗಿ ಅರಸುತ್ತಿದ್ದಾಗ ಎಲ್ಲೆಲ್ಲೂ ನಕಾರವೇ. ಸರಿ ಇನ್ನು ಹೊಟ್ಟೆಗೆ ತಣ್ಣೀರು ಬಟ್ಟೆಯೇ ಗತಿ ಎಂದುಕೊಂಡಾಗ, ಏನು ಸಾರ್ ಕನ್ನಡದವರಾ ನೀವು, ಎನ್ನುತ್ತಾ ಬಂದ ಬೆಂಗಳೂರಿನವರೊಬ್ಬರು ಎಲ್ಲೋ ಗಲ್ಲಿಯಲ್ಲಿದ್ದ ಅನ್ನಪೂರ್ಣ ಎಂಬ ಊಟದ ಹೋಟೆಲ್ ತೋರಿಸಿ ಪುಣ್ಯ ಕಟ್ಟಿಕೊಂಡರು. ಮುಂದಿನ ಒಂದು ತಿಂಗಳಿಗೆ ಅದೇ ನಾವು ಮಾಡಿದ ಕಡೆಯ, ನಮ್ಮ ಶೈಲಿಯ ಊಟವಾಯಿತು.

ಮುಂದೆ ಸಾಗಿದಂತೆಲ್ಲಾ ಚಪಾತಿ, ರೋಟಿ, ದಾಲ್ ಗಳಿಗೆ ಹೊಂದಿಕೊಂಡೆವು. ಇನ್ನೂ ಮುಂದೆ ಉತ್ತರಕ್ಕೆ ಹೋದಂತೆಲ್ಲಾ ಹೆಚ್ಚು ಹೆಚ್ಚು ಸಿಹಿ ತಿಂಡಿಗಳಿಗೆ ಅಭ್ಯಾಸ ಮಾಡಿಕೊಳ್ಳಬೇಕಾಯಿತು. ಉತ್ತರ ಪ್ರದೇಶ, ರಾಜಸ್ಥಾನಗಳಲ್ಲಂತೂ ಬೆಳಗ್ಗೆ ತಿಂಡಿಗೇ ಜಾಮೂನ್, ಬೂಂದಿ, ಜಿಲೇಬಿಗಳನ್ನು ತಿನ್ನುತ್ತಿದ್ದೆವು, ಧಾರಾಳವಾಗಿ ಕೆನೆ ಭರಿತ ಹಾಲು ಕುಡಿಯುತ್ತಿದ್ದೆವು. ಇಬ್ಬರೂ ಹೊಟ್ಟೆ ಬಿರಿಯೆ ತಿಂದರೂ ಹದಿನೈದು ಇಪ್ಪತ್ತು ರೂಪಾಯಿಗಿಂತ ಹೆಚ್ಚು ಆಗುತ್ತಿರಲಿಲ್ಲ. ಪೂರಿ, ಪರೋಟಾ, ಪಕೋಡ, ಸಬ್ಜಿ, ಮಿಸಳ್ ಎಂಬ ಕಾಳಿನ ಮಸಾಲೆಗಳಿಗೆ ಹೊಂದಿಕೊಂಡುಬಿಟ್ಟೆವು.

ಮುಂಜಾವಿನಲ್ಲಿ ಮಿನುಗುವ ನರ್ಮದಾ.

ಅಗಲಿದ ಆಂಧ್ರ: 1989 ಜನವರಿ 1, ಹಿತಕರವಾದ ಮುಂಜಾವಿನ ಎಳೆ ಬಿಸಿಲಿನಲ್ಲಿ ಪೆನುಗಂಗಾ, ಎಂಬ ನದಿಯನ್ನು ದಾಟುವ ಮೂಲಕ ಆಂಧ್ರ ಪ್ರದೇಶವನ್ನು ದಾಟಿ, ಮಹಾರಾಷ್ಟ್ರ ಪ್ರವೇಶಿಸಿದೆವು. ಏಳು ದಿನಗಳಲ್ಲಿ ಸುಮಾರು ಏಳುನೂರು ಕಿಲೋಮೀಟರ್ ಕ್ರಮಿಸಿದ್ದೆವು. ಆದರೆ ಮೊದಲ ದಿನದಿಂದಲೂ ಇಲ್ಲಿಯವರೆವಿಗೂ NH 7 ನಲ್ಲಿಯೇ ಇದ್ದೆವು.

ಮುಂದಿನ ಪುಟ ನೋಡಿ ...

ಅನಿರೀಕ್ಷಿತ ಅತಿಥಿಗಳು: ಮಹಾರಾಷ್ಟ್ರದಲ್ಲಿ ಎರಡನೆಯ ದಿನ ನಾಗಪುರದಲ್ಲಿ ನಮ್ಮ ಮೊಕ್ಕಾಂ. ನಮ್ಮಣ್ಣ ನನ್ನನ್ನು ಬೇಗಬೇಗನೆ ಸಿದ್ಧವಾಗಲು ಹೇಳಿದ. ಕಾರಣ ತಿಳಿಯದೆ ನಾನು ಸಿದ್ಧನಾದೆ. ಸರಿ ಠೀಕುಠಾಕಾಗಿ ಇಬ್ಬರೂ ರಿಕ್ಷಾ ಹಿಡಿದು ಹೊರಟೆವು. ನಮ್ಮಣ್ಣ ಯಾವುದೋ ವಿಳಾಸ ತಿಳಿಸಿದ. ನೋಡಿದರೆ ಒಂದು ಮದುವೆ ಮನೆಗೆ ಬಂದಿದ್ದೇವೆ! ಆಗ ಹೇಳುತ್ತಾನೆ, ಇವತ್ತು ನನ್ನ ಸಹೋದ್ಯೋಗಿಯ ಮದುವೆ ಎಂದು. ಒಳಗೆ ಹೋದರೆ ಮತ್ತೂ ಆಶ್ಚರ್ಯ ಏನೆಂದರೆ ಮದುಮಗನಿಗೆ ಕೂಡ ನನ್ನಣ್ಣ ಬರುವ ವಿಷಯ ತಿಳಿದಿಲ್ಲ. ಅವರಂತೂ ದಂಗಾಗಿ ಹೋದರು. ಬೆಂಗಳೂರಿನಿಂದ ನಾಗಪುರಕ್ಕೆ ಗೆಳೆಯನೊಬ್ಬ ಮದುವೆಗೆ ಬರುವುದೇ ದೊಡ್ಡ ವಿಷಯ, ಅದರಲ್ಲೂ ಸೈಕಲ್ ಮೇಲೆ ಎಂದರೆ ಇನ್ನೂ ಕೇಳಬೇಕೆ. ಮದುವೆ ಮನೆಯಲ್ಲಿ ನೆರೆದಿದ್ದವರಿಗೆ ಗಂಡು ಹೆಣ್ಣಿಗಿಂತಲೂ ಹೆಚ್ಚಾಗಿ ನಮ್ಮದೇ ಆಕರ್ಷಣೆಯಾಗಿ ಹೋಯಿತು. ಎಲ್ಲರೂ ನಮ್ಮನ್ನು ವಿಚಾರಿಸಿದ್ದೇ ವಿಚಾರಿಸಿದ್ದು, ಜಿಲೇಬಿ ನಮಗೆ ಬಡಿಸಿದ್ದೇ ಬಡಿಸಿದ್ದು. ಅಂದು ಮದುವೆ ಊಟ ಮಾಡಿ ನಮಗೆ ಮಧ್ಯಾಹ್ನ ಮಲಗದೆ ಬೇರೆ ದಾರಿಯೇ ಇರಲಿಲ್ಲ.

ಮೋಡಿಮಾಡಿದ ಮಧ್ಯಪ್ರದೇಶ: ಮಹಾರಾಷ್ಟ್ರದಲ್ಲಿ ನಾಲ್ಕು ದಿನಗಳ ನಂತರ ನಮ್ಮ ಮತ್ತು ರಾಷ್ಟ್ರೀಯ ಹೆದ್ದಾರಿ ೭ ರ ನಡುವಿನ ಸಂಬಂಧ ಕಡಿಯಿತು. ಒಂದೇ ಹೆದ್ದಾರಿಯಲ್ಲಿ ೧೧ ದಿವಸಗಳ ಕಾಲ ಸುಮಾರು ೧೨೫೦ ಕಿಮೀ ದೂರ ಪ್ರಯಾಣ ಮಾಡಿದ್ದೆವು. ಲಖನ್ ದೌನ್ ಎಂಬಲ್ಲಿ ಹೆದ್ದಾರಿ ೨೬ ಕ್ಕೆ ತಿರುಗುವುದರೊಂದಿಗೆ ಮಧ್ಯ ಪ್ರದೇಶ ಪ್ರವೇಶಿಸಿದೆವು. ಹಳ್ಳ ಕೊಳ್ಳದ ರಸ್ತೆಗಳು, ಧೂಳು ಗಲೀಜು ತುಂಬಿದ ಊರುಗಳ ಮೂಲಕ ಹೊರನೋಟಕ್ಕೆ ಇದೊಂದು ಬಲು ಹಿಂದುಳಿದ ರಾಜ್ಯವೆಂಬ ಅಭಿಪ್ರಾಯಮೂಡಿತ್ತು. ಆದರೆ ಮುಂದೆ ಸಾಗಿದಂತೆಲ್ಲಾ ಅದೊಂದು ನಿಗೂಢ ರಾಜ್ಯವೆಂದು ಅರಿವಾಯಿತು. ಬಟ್ಟ ಬಯಲೆಂದುಕೊಡಾಗ ದುತ್ತೆಂದು ಅರಣ್ಯವೆದುರಾಗುತ್ತಿತ್ತು. ಸಮತಟ್ಟಾದ ಪ್ರದೇಶದಲ್ಲಿ ಸಾಗುತ್ತಿದ್ದಾಗ ಇದ್ದಕ್ಕಿದ್ದಂತೆ ಘಟ್ಟ ಪ್ರದೇಶಗಳು ಸಿಗುತ್ತಿತ್ತು. ಬಡತನವು ತಾಂಡವಾಡುತ್ತಿರುವ ನಗರಗಳ ಮಧ್ಯಭಾಗದಲ್ಲಿ, ವೈಭವೋಪೇತ ಬಂಗಲೆಗಳು ಕಾಣುತ್ತಿತ್ತು. ಯಾವುದೇ ಒಂದು ಅಭಿಪ್ರಾಯಕ್ಕೂ ಬರಲಾಗುತ್ತಿರಲಿಲ್ಲ. ಶಿವನಿ, ನರಸಿಂಘಪುರ ಗಳಂತಹ ಹಿಂದುಳಿದ ಊರುಗಳೊಂದೆಡೆಯಾದರೆ, ಗ್ವಾಲಿಯರ್ ನಂತಹ ಶ್ರೀಮಂತ ನಗರಗಳೂ ಇದ್ದವು.

ಮುಗ್ಧರ ಕುತೂಹಲ: ದಾರಿಯುದ್ದಕ್ಕೂ ಅರಣ್ಯಪ್ರದೇಶಗಳು, ಅಲ್ಲಿನ ಆದಿವಾಸಿಗಳು ಸಿಗುತ್ತಿದ್ದರು. ಚಹಾ ನೀಡಿ ಸತ್ಕರಿಸುತ್ತಿದ್ದರು. ಅವರಿಗೆ ನಮ್ಮ ಸೈಕಲ್ ಗಳ ಬಗ್ಗೆ ವಿಶೇಷ ಕುತೂಹಲ. ನಮಗೆ ಅವರ ಹುಲ್ಲು ಹೊದಿಸಿದ ಮಣ್ಣಿನ ಮನೆಗಳ ಬಗ್ಗೆ ಕುತೂಹಲ. ಒಮ್ಮೆ ನಮ್ಮಣ್ಣನ ಸೈಕಲ್ ಸುತ್ತಲೂ ಸುಮಾರು ೪೦-೫೦ ಜನ ಸೇರಿಕೊಂಡು ಅದರ ಭಾಗ ಭಾಗವನ್ನೂ ಪರೀಕ್ಷಿಸುತ್ತಾ ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದರು. ನಾನು ಅಷ್ಟೇ ಆಸಕ್ತಿಯಿಂದ ಉತ್ತರಿಸುತ್ತಾ, ಹಾಗೆಯೇ ನಮ್ಮಣ್ಣನಿಗೆ, ಅವರಿಗೆ ತಿಳಿಯದಂತೆ ಅವರುಗಳು ಸೈಕಲ್ ಪರೀಕ್ಷಿಸುತ್ತಿರುವ ಒಂದು ಫೋಟೋ ತೆಗೆಯಲು ತಿಳಿಸಿದೆ. ನನ್ನಣ್ಣ ಬ್ಯಾಗಿನಿಂದ ಕ್ಯಾಮೆರ ಹೊರ ತೆಗೆದು ಅದನ್ನು ಸೆಟ್ ಮಾಡಿಕೊಂಡು ಫೋಟೋ ತೆಗೆಯಲು ನೋಡಿದರೆ, ಎಲ್ಲರೂ ಸೈಕಲ್ಲನ್ನು ಬಿಟ್ಟು, "ಈ"' ಎಂದು ಹಲ್ಲು ಬಿಡುತ್ತಾ ಗ್ರೂಪ್ ಫೋಟೋಗೆ ನಿಲ್ಲುವಂತೆ ಕ್ಯಾಮೆರಾ ಕಡೆ ತಿರುಗಿ ನಿಂತಿದ್ದಾರೆ! ನಮ್ಮಿಬ್ಬರಿಗೂ ಅವರ ಅಮಾಯಕತೆ ಬಹಳಷ್ಟು ನಗು ತಂದಿತ್ತು.

"ದತಿಯಾ' ದ ಪುರಾತನ ಮಹಲ್

ನನಗೆ ಮೊದಲಿನಿಂದಲೂ ನರ್ಮದಾ ನದಿ ಎಂದರೆ ಅದೇನೋ ಕುತೂಹಲ, ನೋಡಬೇಕೆಂಬ ಹೆಬ್ಬಯಕೆ. ನರಸಿಂಘಪುರ ದಾಟಿದ ಮೇಲೆ ಹೆಬ್ಬಂಡೆಗಳ ನಡುವೆ, ಸುಂದರವಾಗಿ ಬಳುಕಿ ಸಾಗುವ ನೀಲ ವರ್ಣದ ನರ್ಮದೆಯನ್ನು ಕಂಡಾಗ ಅದೇನೋ ಮೈಯಲ್ಲಿ ರೋಮಾಂಚನ. ಅಂತೆಯೇ ಮತ್ತೊಂದು ಪ್ರಸಿದ್ಧ ನದಿಯಾದ ಚಂಬಲ್ ಅನ್ನು ಕೂಡ ಚಂಬಲ್ ಕಣಿವೆಯಲ್ಲಿ ದಾಟಿದೆವು. ಸಿಪಾಯಿ ರಾಮು ಚಿತ್ರದಿಂದಾಗಿ ಚಂಬಲ್ ಬಗ್ಗೆ ಪ್ರಭಾವಿತನಾಗಿದ್ದ ನಾವು, ಡಕಾಯಿತರು ಎಲ್ಲಾದರೂ ಕಾಣಬಹುದೇನೋ ಎಂದು ಹುಡುಕುತ್ತಿದ್ದೆವು. ಆದರೆ ಅಲ್ಲಿ ಸಾಮಾನ್ಯ ಜನರು ಕೂಡ ಹೆಗಲಿಗೆ ಬಂದೂಕುಗಳನ್ನು ಧರಿಸಿ ಓಡಾಡುತ್ತಿದ್ದರು.

ಏನು ಕಾರಣವೋ ತಿಳಿಯಲಿಲ್ಲ, ಆದರೆ ಮುಗ್ಧರು, ಸ್ನೇಹಶೀಲರು ಎಂಬುದು ಮಾತ್ರ ಚೆನ್ನಾಗಿ ಸಾಬೀತಾಯಿತು.

ಮುಂದಿನ ಪುಟ ನೋಡಿ ...

ಮುಗ್ಗರಿಸಿದ ರಥ: ಮಧ್ಯ ಪ್ರದೇಶದ ಮಧ್ಯದಲ್ಲಿ ಉತ್ತರಪ್ರದೇಶ ಸ್ವಲ್ಪ ತೂರಿಕೊಂಡಿದೆ. ಲಲಿತಪುರ, ಝಾನ್ಸಿ ಈ ಭಾಗದಲ್ಲಿರುವ ದೊಡ್ಡ ಊರುಗಳು. ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಪ್ರಸಿದ್ಧಳಾದ ಝಾನ್ಸಿ ರಾಣಿ ಲಕ್ಷ್ಮೀಬಾಯಿಯ ಕೋಟೆ ಕೊತ್ತಲಗಳ ನಡುವೆ ಪ್ರದರ್ಶಿತವಾಗುವ ನೆರಳು ಬೆಳಕಿನ 'ಆಜಾದೀ ಕಿ ಪಹೇಲಿ ಜಂಗ್' ಎಂಬ ಇತಿಹಾಸದ ರೂಪಕವಂತೂ ರೋಮಾಂಚನಕಾರಿಯಾಗಿತ್ತು. ಮಾರನೆಯ ದಿನ ಝಾನ್ಸಿಯಿಂದ ಹೊರಟು ದತಿಯಾ ಎಂಬ ಊರಿನೆಡೆ ಸಾಗುತ್ತಿದ್ದೆವು. ಹಿಂದಿನ ದಿನದ ನಾಟಕದ ಗುಂಗು ಇನ್ನ ಹಾಗೇ ಇತ್ತು. ಎದುರಿಗೆ ಒಂದು ಭವ್ಯವಾದ ಹಳೆಯ ಬಂಗಲೆ ಕಾಣುತ್ತಿತ್ತು, ಹಿಂದಿ ಸಿನೆಮಾ ಪುರಾನಾ ಮಂದಿರ್ ನ ಹಾಗೆ! ನಾನು ಅದನ್ನು ನೋಡುತ್ತಾ, ಹಿಂದೆ ಅದು ಕಂಡಿರಬಹುದಾದ ವೈಭವ, ದರ್ಪ, ವಿರಸ ವಿರಹಗಳನ್ನು, ಊಹಿಸಿಕೊಳ್ಳುತ್ತಾ ಮುಂದೆ ಸಾಗುತ್ತಿದ್ದಂತೆ, ನನ್ನ ಎರಡು ಚಕ್ರದ ರಥ ಮುಂದಕ್ಕೆ ಮುಗ್ಗರಿಸಿ, ನಾನು ಕೆಳಗೆ ಬೀಳುವಂತಾಯಿತು.

ಮುರಿದ ರಥ

ಏನಾಯಿತೆಂದು ನೋಡಿದರೆ ಏನೂ ತಿಳಿಯುತ್ತಿಲ್ಲ. ರಸ್ತೆಯಲ್ಲಿ ಹಳ್ಳವಿಲ್ಲ! ಬೆಂಗಳೂರಿನ ಹಾಗೆ ರೋಡ್ ಹಂಪ್ ಗಳಿಲ್ಲ!! ಸೈಕಲ್ ಪಂಕ್ಚರ್ ಆಗಿಲ್ಲ!!! ಸೈಕಲ್ ಎತ್ತರವೂ ಕಡಿಮೆಯಾದಂತಿದೆ!!! ನಮ್ಮಣ್ಣನಿಗೂ ಎನೂ ಗೊತ್ತಾಗಲಿಲ್ಲ. "ನೀನೆಲ್ಲೋ ಕನಸು ಕಾಣುತ್ತಿದ್ದೆಯೇನೊ" ನಡಿ ನಡಿ ಎಂದ. ಸರಿ ಎಂದು ಮುಂದೆ ಹೋಗಲು ನೊಡಿದರೆ ಸೈಕಲ್ ತುಳಿಯುವುದೇ ಕಷ್ಟವಾಗುತ್ತಿದೆ!?. ರಸ್ತೆ ಬದಿಯಲ್ಲಿ ಸೈಕಲ್ ನಿಲ್ಲಿಸಿ ಮತ್ತೊಮ್ಮೆ ನೋಡಿದಾಗ ಇಬ್ಬರಿಗೂ ಶಾಕ್ ಆಯಿತು. ಸೈಕಲ್ ನ ಮುಖ್ಯ ಭಾಗವಾದ ಮಧ್ಯದ ಫ್ರೇಮೇ ತುಂಡಾಗಿದೆ.

ಎರವಲು ತಂದಿದ್ದ ಸೈಕಲ್: ಆ ಸೈಕಲ್ಲನ್ನು ನನ್ನ ಗೆಳೆಯ ನನಗೆ ಈ ಪ್ರವಾಸಕ್ಕಾಗಿ ನನಗೆ ಎರವಲು ನೀಡಿದ್ದರು. ಆ ಸೈಕಲ್ ಈಗ ಏನು ಮಾಡುವುದೆಂದು ತಿಳಿಯಲಿಲ್ಲ. ಅಂತಹ ದೊಡ್ಡ ಸೈಕಲ್ ಅಂಗಡಿ ಇರುವಂತಹ ಊರೂ ಸಹ ಸನಿಹದಲ್ಲಿ ಇರುವ ಹಾಗೆ ಕಾಣಲಿಲ್ಲ. ಲಾರಿಯಲ್ಲಿ ಹಾಕಿಕೊಂಡು ಬೇರೆ ಊರಿಗೆ ತೆಗೆದುಕೊಂಡು ಹೋಗೋಣವೆಂದು ಕೊಂಡೆವು. ಮತ್ತೆ ಅದರ ಫ್ರೇಮ್ ಬದಲಾಯಿಸುವ ದುಡ್ಡಿಗೆ ಹೊಸ ಸೈಕಲ್ಲೇ ಬರಬಹುದೆನಿಸಿತು. ಸರಿ ಎದುರಿಗೆ ಕಾಣುತ್ತಿದ್ದ ಊರಿನಲ್ಲಿ ಯಾರಾದರೂ ಏನಾದರೂ ಪರಿಹಾರ ಸೂಚಿಸ ಬಹುದೇನೋ ಎಂದುಕೊಂಡು ತಳ್ಳಿಕೊಂಡು ನಡೆದೆವು... ▪

ಮುಂದಿನ ಸಂಚಿಕೆಯಲ್ಲಿ: ಬೆಟ್ಟದಂತಹ ಕಷ್ಟ ಮಂಜಿನಂತೆ ಮಾಯ...

ನಿಮ್ಮ ಜೀವನದ ಅನುಭವ ನಮ್ಮ ಓದುಗರೊಂದಿಗೆ ಹಂಚಿಕೊಳ್ಳಲು ಬಯಸುವಿರಾದರೆ

horanadachilume@gmail.com ಗೆ ನಿಮ್ಮ ಲೇಖನ ಕಳುಹಿಸಿ

ಆಸ್ಟ್ರೇಲಿಯಾ ಪಾರ್ಲಿಮೆಂಟಿನಲ್ಲಿ ದೀಪಾವಳಿ

ಲೇಖಕರು: ಶ್ರೀಧರ್ ಕುಂಸಿ

ಒಂಬತ್ತನೆಯ ವರ್ಷದ ದೀಪಾವಳಿ ಹಬ್ಬವನ್ನು ಕ್ಯಾನ್ಬೆರ ಪಾರ್ಲಿಮೆಂಟ್ ಭವನದ ಅಸೆಂಬ್ಲಿಯ ಹಾಲ್ ನಲ್ಲಿ ಸೋಮವಾರ ಸಂಜೆ ಡಿಸೆಂಬರ್ ೨, ೨೦೧೩ ರಂದು ಹಿಂದೂ ಕೌನ್ಸಿಲ್ ಆಫ್ ಆಸ್ಟ್ರೇಲಿಯಾ ಕ್ಯಾನ್ಬೆರ್ರ ಮತ್ತು ಸಿಡ್ನಿ ಶಾಖೆಗಳು ವಿಜೃಂಭಣೆಯಿಂದ ಆಚರಿಸಿದರು. ವೈಶಿಷ್ಟ್ಯವೆಂದರೆ ವಾರದ ದಿನ ಹಬ್ಬ ಆಚರಿಸಿ ಸದನ ಸದಸ್ಯರುಗಳು ಹೆಚ್ಚಿನ ಸಂಖ್ಯೆ ಯಲ್ಲಿ ಪಾಲ್ಗೊಳ್ಳುವುದಕ್ಕೆ ಅವಕಾಶವಾದದ್ದು.

ಸಿಡ್ನಿಯಿಂದ ಸುಮಾರು ೨೫ ಜನರು ಮತ್ತು ಕ್ಯಾನ್ಬೆರ ಪುರಜನರು ಸಂಜೆ ೬ ಘಂಟೆಗೆ ಅಸೆಂಬ್ಲಿಯ ಹಾಲ್ನಲ್ಲಿ ನೆರೆದೆವು. ಸಮಾರಂಭದ ಹಾಲ್ ಅನ್ನು ಹಬ್ಬದ ವಾತಾವರಣಕ್ಕೆ ಸುಸಜ್ಜಿತವಾಗಿ ಅಲಂಕರಿಸಲಾಗಿತ್ತು.

ಸಮಾರಂಭ ಪ್ರಾರಂಭದ ಮುಂಚೆ ವಿರೋಧ ಪಕ್ಷದ ನಾಯಕರಾದ ಶ್ರೀ ಬಿಲ್ ಷಾರ್ಟೆನ್ ಪ್ರವೇಶಿಸಿ ನೆರೆದಿದ್ದ ಸಮುದಾಯದವರೆಲ್ಲರನ್ನು ಭೇಟಿ ಮಾಡಿ ತಾವು ಕಾರ್ಯಕ್ರಮಕ್ಕೆ ಇರಲು ಆಗುವುದಿಲ್ಲ ಎಂಬುದನ್ನು ವ್ಯಕ್ತ ಪಡಿಸಿ ತಮ್ಮ ಸಣ್ಣ ಭಾಷಣದಲ್ಲಿ ಆಸ್ಟ್ರೇಲಿಯಾದಲ್ಲಿ ಭಾರತೀಯರ ಕೊಡುಗೆಯನ್ನು ಶ್ಲಾಘಿಸಿದರು.

ಕಾರ್ಯಕ್ರಮವನ್ನು ಶ್ರೀ ಕಾಂತಿ ಜಿನ್ನಾ ಪ್ರಾರಂಭಿಸಿದರು. ದೀಪವನ್ನು ಬೆಳಗುವುದಕ್ಕೆ ಮುಖ್ಯ ಅತಿಥಿಗಳಾಗಿ ಬಂದಿದ್ದ ಸೆನೆಟರ್ ಶ್ರೀಮತಿ ಕಾಂಸೆತ್ತ ಫಿರವೆಂತಿವೆಲ್ಸ್ ಪಾರ್ಲಿಮೆಂಟ್ ಸೆಕ್ರಟರಿ ಟು ಮಿನಿಸ್ಟರ್ ಆಫ್ ಸೋಶಿಯಲ್ ಸರ್ವಿಸ್ ಅವರನ್ನು ಮತ್ತು ಇತರ ಸಮುದಾಯಗಳ ಅಧ್ಯಕ್ಷರುಗಳನ್ನೂ ವೇದಿಕೆಗೆ ಆಹ್ವಾನಿಸಿದರು. ಮುಖ್ಯ ಅತಿಥಿಗಳವರು ಸೀರೆಯನ್ನು ಉಟ್ಟು ಭಾರತೀಯರಂತೆ ಕಾಣುತ್ತಿದ್ದರು. ಎಲ್ಲ ಅತಿಥಿಗಳು ದೀಪವನ್ನು ಬೆಳಗಿದ ನಂತರ ಸೆನೆಟರ್ ಮಾತನಾಡುತ್ತ ದೀಪಾವಳಿ ಹಬ್ಬ ಎಲ್ಲ ಸಮುದಾಯದವರನ್ನು ಒಟ್ಟು ಗೂಡಿಸುವ ಒಂದು ಮುಖ್ಯ ಹಬ್ಬವಾಗಿದೆಯೆಂದು ತಿಳಿಸಿದರು.

ಮುಂದೆ ಚೆ. ಮಾನಸ ಚೆಂತಕಿಂಡಿ ಗಣೇಶ ವಂದನೆಯನ್ನು ಸುಂದರವಾಗಿ ಹಾಡಿದರು ಮತ್ತು ಶ್ರೀ ಪಂಡಿತ ಪ್ರದೀಪ್ ವೇದ ಘೋಷಗಳನ್ನು ಮಾಡಿ ಅತಿಥಿಗಳಿಗೆ ಆಶೀರ್ವಾದ ಮಾಡಿದರು.

ಪ್ರೊ. ನಿಹಾಲ್ ಅಗರ್ ಹಿಂದೂ ಕೌನ್ಸಿಲ್ ಆಫ್ ಆಸ್ಟ್ರೇಲಿಯಾ ಅಧ್ಯಕ್ಷರು ಆಗಮನ ಭಾಷಣದಲ್ಲಿ ದೀಪಾವಳಿ ಹಬ್ಬ ಕತ್ತಲೆ ನೀಗಿಸಿ ಬೆಳಕು ನೀಡುವ ಹಬ್ಬ ಎಂದು ತಿಳಿಸಿದರು.

ಶ್ರೀಮತಿ ಮಿಷೆಲ್ ರೌಲಂಡ್ ಶಾಡೋ ಮಂತ್ರಿಗಳು ಮತ್ತು ಗ್ರೀನ್ ವೆ ಸದಸ್ಯರು ಮಾತನಾಡುತ್ತ ದೀಪಾವಳಿ ಹಬ್ಬ ಆಸ್ಟ್ರೇಲಿಯಾದಲ್ಲಿ ಒಂದು ಮುಖ್ಯವಾದ ಹಬ್ಬವಾಗಿ ರೂಪುಗೊಳ್ಳುತ್ತಿದೆ ಎಂದು ಹೇಳಿದರು.

ಶ್ರೀ ಸುರೀಂದರ್ ದತ್ತ ಭಾರತದ ಡೆಪ್ಯುಟಿ ಹೈ ಕಮೀಷನರ್ ಮಾತನಾಡುತ್ತ ದೀಪಾವಳಿ ಹಬ್ಬದ ಇತಿಹಾಸದ ಬಗ್ಗೆ ವಿವರಿಸಿದರು.

ಮುಂದಿನ ಪುಟ ನೋಡಿ ...

ಈ ಕಾರ್ಯಕ್ರಮಗಳ ನಂತರ ಎಲ್ಲ ಅತಿಥಿಗಳಿಗೂ ಸತ್ಕಾರ ಮಾಡಲಾಯಿತು.

ತದನಂತರ ಸೆನೆಟರ್ ಜೆಡ್ ಸೇಸೆಲ್ಜ್ ಲೇಬರ್ ಸೆನೆಟರ್ ಎ.ಸಿ.ಟಿ. ಅವರು ತಮ್ಮ ಭಾಷಣದಲ್ಲಿ ದೀಪಾವಳಿ ಹಬ್ಬ ಅರ್ಥಪೂರ್ಣ ಹಬ್ಬವೆಂದು ತಿಳಿಸಿದರು.

ಶ್ರೀಮತಿ ಮಾಲ ಮೆಹತ ಹಿಂದಿ ಶಾಲೆ ಕಳೆದ ಹತ್ತು ವರುಷಗಳಿಂದ ತಾವು ಸಿಡ್ನಿಯಲ್ಲಿ ಸ್ವತಹ ನಡೆಸುತ್ತಿರುವುದಾಗಿ ತಿಳಿಸಿ ಅತಿಥಿಗಳಿಗೆ ಕೈಪಿಡಿ ನೀಡಿ ಸರಕಾರ ಹಿಂದಿ ಶಾಲೆ ಪ್ರಾರಂಭಿಸಲು ಕೇಳಿಕೊಂಡರು.

ಶ್ರೀಮತಿ ಲಿಸಾ ಸಿಂಗ್, ಸೆನೆಟರ್, ಟಾಸ್ಮೆನಿಯ, ಮಾತನಾಡುವಾಗ ಅವರು ಫಿಜಿಯಿಂದ ಬಂದಿರುವ ಮೊಟ್ಟ ಮೊದಲ ಭಾರತೀಯ ಮೂಲದವರು ಎಂಬ ಹೆಗ್ಗಳಿಕೆಗೆ ಪಾತ್ರರಾದರು ಮತ್ತು ಅವರು ಈಗ ೪೦೦,೦೦೦ ರಕ್ಕೂ ಹೆಚ್ಚು ಭಾರತೀಯರು ಈಗ ಇಲ್ಲಿ ನೆಲೆಸಿರುವೆರೆಂದು ತಿಳಿಸಿದರು.

ಕಡೆಯದಾಗಿ ಮಾತನಾಡಿದ ಸೆನೆಟರ್ ಶ್ರೀ ಫಿಲ್ಲಿಪ್ ರಡಕ್ ಭಾರತೀಯರು ಬಹಳ ಉತ್ಸಾಹಶಾಲಿಗಳು ಮತ್ತು ಅವರ ಸಾಧನೆಗಳು ಶ್ಲಾಘನೀಯ ಎಂದು ಕೊಂಡಾಡಿದರು. ಕಾಂತಿ ಜಿನ್ನಾ ಶ್ರೀ ರಡಕ್ ನಮ್ಮ ಸಮುದಾಯಕ್ಕೆ ಕಳೆದ ೧೫ ವರುಷಗಳಿಂದ ಅತ್ಯಂತ ಸಹಾಯ ನೀಡಿದ್ದಾರೆ ಎಂದು ಹೇಳಿದರು.

ಶ್ರೀ ಸಂಜೀವ್ ಭಕ್ರಿ, ಹಿಂದೂ ಕೌನ್ಸಿಲ್ ಹಮ್ಮಿಕೊಂಡಿರುವ ಯೋಜನೆಗಳ ಬಗ್ಗೆ ಮತ್ತು ಇದುವರೆಗೂ ಆಚರಿಸಿರುವ ಚಟುವಟಿಕೆಗಳ ಬಗ್ಗೆ ವಿವರವಾಗಿ ಕೊನೆಯಲ್ಲಿ ತಿಳಿಸಿದರು.

ಶ್ರೀ ಪ್ರಕಾಶ್ ಮೆಹತ, ಕ್ಯಾನ್ಬೆರ ಶಾಖೆ ಅಧ್ಯಕ್ಷರು, ವಂದನಾರ್ಪಣೆ ನೀಡಿ ಕಾರ್ಯಕ್ರಮ ಮುಕ್ತಾಯ ಗೊಳಿಸಿದರು. ಅವರು ಮುಂದಿನ ದೀಪಾವಳಿ ಹಬ್ಬ ೧೦ನೆಯ ವರ್ಷದಾಗಿದ್ದು ನವೆಂಬರ್ ೨೩, ೨೦೧೪ ರಂದು ಆಚರಿಸುವುದಾಗಿ ತಿಳಿಸಿದರು.

ಕಾರ್ಯಕ್ರಮದ ಪೂರ್ತಿ ಸಿಹಿ ತಿಂಡಿ, ಸಮೋಸ ಮತ್ತು ಪಾನೀಯಗಳನ್ನೂ ಹಂಚಲಾಯಿತು. ಮತ್ತು ಹಬ್ಬದ ಸಮಾರಂಭವನ್ನು ಏರ್ಪಡಿಸಿದ ಆಸ್ಟ್ರೇಲಿಯಾ ಹಿಂದೂ ಕೌನ್ಸಿಲ್ ಅವರ ಸದಸ್ಯರುಗಳನ್ನು ಎಲ್ಲರೂ ಪ್ರಶಂಸಿದರು

ಹೀಗೆ ದೀಪಾವಳಿ ಹಬ್ಬ ಸ್ಮರಣೀಯವಾಗಿ ಮುಕ್ತಾಯ ಗೊಂಡಿತು. ▪

ಛಾಯಾ ಚಿಲುಮೆ – ಕ್ಲಿಕ್ ಕ್ಲಿಕ್ ಕ್ಲಿಕ್

ನೀವು ತೆಗೆದ ಚಿತ್ರ ಇಲ್ಲಿ ಕಾಣಬೇಕೇ

ಇ-ಮೇಲ್ ಮಾಡಿ: horanadachilume@gmail.com

ಸಿಡ್ನಿ ಕನ್ನಡ ಶಾಲೆ - ವಾರ್ಷಿಕೋತ್ಸವ ಚಿತ್ರಗಳು

ಜಾಣ ಕರ್ನಾಟಕ – ಉತ್ತರ

೧. ದಾವಣಗೆರೆ ಜಿಲ್ಲೆಯ ಚೆನ್ನಗಿರಿ ತಾಲೂಕು. ಕರ್ನಾಟಕದ ಅತ್ಯಂತ ದೊಡ್ಡ ಕೆರೆ. ಸೂಳೆಕೆರೆ.

೨ ರಾಮನಗರ. ರೇಷ್ಮೆ ಮತ್ತು ಮಾವು.

ವಿಜ್ಞಾನ

ಮೇಲ್ಮೈ ಎಳೆತ (Surface Tension)

ಸಂಕಲನ: ಬದರಿ ತ್ಯಾಮಗೊಂಡ್ಲು

ನೀರಿನ ಮೇಲೆ ಅನೇಕ ಕೀಟಗಳು ನಡೆದಾಡಿಕೊಂಡು ಹೋಗುವುದನ್ನು ನೀವು ನೋಡಿರಬಹುದು. ಇದೇನು ಇವೆಕ್ಕೇನಾದರೂ ವರ ಕೊಟ್ಟಿರುವನೋ ಆ ಭಗವಂತ ಅಂದ್ಕೋಬೇಡಿ. ಇದರ ಹಿಂದಿನ ವಿಜ್ಞಾನ ತಿಳಿಯಲು ಈ ಪ್ರಯೋಗ ಮಾಡೋಣ ಬನ್ನಿ.



ಬೇಕಾಗುವ ಸಾಮಾನು:

ಪೇಪರ್ ಕ್ಲಿಪ್, ಒಂದು ಟಿಶ್ಯೂ ಪೇಪರ್, ನೀರು ತುಂಬಿದ ಒಂದು ಲೋಟ, ಚೂಪಾದ ಪೆನ್ಸಿಲ್

ವಿಧಾನ

ನೀರಿನ ಮೇಲೆ ಪೇಪರ್ ಕ್ಲಿಪ್ ತೇಲಿಸಲು ಪ್ರಯತ್ನಪಡಿ. ಆಗುವುದಿಲ್ಲ. ಅದು ಮುಳುಗುವುದು.

ಹೀಗೆ ಮಾಡಿ: ಒಂದು ಟಿಶ್ಯೂ ಪೇಪರ್ ತುಂಡನ್ನು ನೀರಿನ ಮೇಲೆ ತೇಲಿಸಿ. ಬೇಗನೆ ಅದರ ಮೇಲೆ ಪೇಪರ್ ಕ್ಲಿಪ್ ಇಡಿ. ಟಿಶ್ಯೂ ನೆನೆದಂತೆ, ನಿಧಾನವಾಗಿ ಪೆನ್ಸಿಲ್ಲಿನ ಚೂಪು ತುದಿಯಿಂದ ಟಿಶ್ಯೂವನ್ನು ನೀರಿನೊಳಕ್ಕೆ ತಳ್ಳಿ (ಪೇಪರ್ ಕ್ಲಿಪ್ ಅನ್ನು ಮುಟ್ಟದಂತೆ ಎಚ್ಚರವಹಿಸಿ). ಎಲ್ಲವೂ ಸರಿ ಹೋದರೆ ಪೇಪರ್ ಕ್ಲಿಪ್ ತೇಲುವುದು. (ಹಲವು ಬಾರಿ ಈ ಪ್ರಯತ್ನ ಮಾಡಬೇಕಾಗಬಹುದು)

ರಹಸ್ಯ

ಎಲ್ಲಾ ದ್ರವಗಳಿಗೂ ಮೇಲ್ಮೈ ಎಳೆತ (Surface Tension) ಇರುತ್ತದೆ. ಇದೊಂದು ತರಹ ನೀರಿನ ಚರ್ಮ ಅನ್ನಬಹುದು. ನೀರಿನ ಕಣಗಳು ಒಂದಕ್ಕೊಂದು ಬೆಸೆದುಕೊಂಡಿರುತ್ತದೆ. ಒಂದು ನಿರ್ದಿಷ್ಟ ಪ್ರಮಾಣದ ಒತ್ತಡವನ್ನು ಸಹಿಸಿಕೊಳ್ಳುವುದಕ್ಕೆ ಶಕ್ಯವಾಗಿರುತ್ತದೆ. ಹೀಗಾಗಿ ತೆಳುವಾದ ವಸ್ತುಗಳು ತೇಲುತ್ತವೆ. ▪

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಪುರಂದರ ದಾಸರ ಆರಾಧನೆ ೨೦೧೪

2014 – Purandara Dasara Aradhane

Ermington Community hall, 10 River Rd, Ermington,
Sydney, NSW 2115

ದಿನಾಂಕ 02-02-2014 ಬೆಳಗ್ಗೆ - 09:00 ರಿಂದ ಮಧ್ಯಾಹ್ನ 01:00

Chandrika Subramanyam 86777178, Uma Mohan 9771 9229
Thirumalai Giridhar 0421 051 876

Madhvanavami (ಮಧ್ವನವಮಿ)

Venue : SRI MANDIR

Address : No 286 Cumberland Road AUBURN
(Corner of Albert & Cumberland Roads)

Time: 10 A.M. to 1.30 P.M.

Date: 16/ 02/ 2014

Christmas Lights Spectacular

Hunter Valley Gardens
2090 Broke Rd, Pokolbin NSW 2320

ON NOW - 26 January 2014 from 6.30pm
Open every night (except Christmas Day), a magical event the whole family will enjoy! With exciting new displays of 1.5 MILLION CHRISTMAS LIGHTS plus festive food, beverages, Children's entertainment and Santa!
More Info : www.hvg.com.au

ನಮ್ಮ
ಸುತ್ತಾ
ಮುತ್ತಾ

ಭಜರಂಗಿ - ಕನ್ನಡ ಚಲನ ಚಿತ್ರ

Date : 2nd Feb 2014
Start Time : 3PM

Venue : Event Cinemas, Liverpool, Sydney

Contact: Suresh Gowda (0401432282)

ಈ ಸಂಚಿಕೆ ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.